ಲಂಡನ್ ಪಟ್ಟಣದ್ದು. ಆತುರ-ಆಶ್ಚರ್ಯಗಳು ಬೆರೆತ ಹೃದಯದಿಂದ ಒಡೆದು ನೋಡಿದ. ಹಸ್ತಾಕ್ಷರಗಳು ಜೆನಿಯವೆಂದು ಗೊತ್ತಾಯಿತು. ಬೇಗಬೇಗನೆ ಓದಲಾರಂಭಿಸಿದ :

ಲಂ ಡ ನ್,

ಮತ್ತ್ರಿಯ ಸತೀಶನಿಗೆ — ಡಿಸೆಂಬರ್ ೨೫, ೧೯೪೦.

ಸಪ್ರೇಮ ಪ್ರಣಾಮಗಳು

ಪ್ರಿಯ ಸತೀಶ, ನೀನು ಇಲ್ಲಿಂದ ಹೋಗಿ ಎರಡು ವರ್ಷಗಳಾದುವು. ಆದರೆ ಎರಡು ವರ್ಷಗಳಲ್ಲಿ ಅದೆಷ್ಟು ಬದಲು? ನೀನಿಲ್ಲಿದ್ದಾಗ ಲಂಡನ್ ನಗುತ್ತಿತ್ತು. ಅದೇಕೆ ಹೋದ ಸಲ ಕೂಡ ನಮ್ಮಲ್ಲಿ 'ಕ್ರಿಸ್‌ಮಸ್' ನಡೆಯಿತು. ಆದರೆ....ಇಂದು! ಸತೀಶ, ಹುಡುಗರು, ಹೆಂಗುಸರು ಜರ್ಮನ್— ಬಾಂಬುಗಳ ಕೆಳಗೆ ಚೀರುತ್ತಿದ್ದಾರೆ. ನನ್ನ ಬ್ರಿಟನ್ನು ಇಂದು ಭೂಸ್ವರ್ಗವಲ್ಲ. ತನ್ನ ಸುತ-ಸುತೆಯರ ರಕ್ತದಿಂದ ಅದು ಕೆಂಪಾಗಿದೆ. ಸುಡುತ್ತಿರುವ ಮನೆಗಳು, ಅನಾಶ್ರಿತ ಕುಟುಂಬಗಳು, ಗಾಯಾಳುಗಳು, ಚೂರುಚೂರಾಗಿ ಬಿದ್ದ ಕೈಕಾಲು-ತಲೆಪರಟೆಗಳು ಇವೇ ಇಂದಿನ ಲಂಡನ್! ಎಲ್ಲಿ ನೋಡಿದರೂ ಹಾಳು ಹಾಳು! ರುದ್ರಭೀಷಣತೆ!

ಇಲ್ಲಿಯ ಗೋಳಾಟವನ್ನು ಹೇಳತೀರದು. ಇಂದು ಅನ್ನ ಸಿಕ್ಕರೆ ನಾಳೆ ಏನಾಗುವುದೋ ಗೊತ್ತಿಲ್ಲ! ಹೆಂಡಿರು-ಮಕ್ಕಳು ದಿನವೂ ಆವರಿಗೆ ಬಲಿಯಾಗುತ್ತಿದ್ದಾರೆ. ಸ್ವಾತಂತ್ರ್ಯಕ್ಕಾಗಿ ಅವರ ಆಹುತಿ! ಇಷ್ಟು ದಿನ ಸಾಮ್ರಾಜ್ಯಶಾಹಿಯ ವೈಭವದಲ್ಲಿ ಮೈಮರೆತಿದ್ದ ಆಂಗ್ಲರು ಇಂದು ದುಃಖವೆಂದರೇನೆಂಬುದನ್ನು ಅನುಭವಿಸುತ್ತಿದ್ದಾರೆ.

ಎಂಟು ದಿನಗಳ ಕೆಳಗೆ ಸತೀಶ,—ತನ್ನ ತಾಯಿ ಮತ್ತು ಅಣ್ಣ ಇಬ್ಬರೂ ಬಾಂಬಿಗೆ ಆಹುತಿಯಾದರು? ನನಗೆ ಪಸೀ ಒಬ್ಬನಾದರೂ ಉಳಿದುಕೊಂಡನೆಂದಿದ್ದೆ. ಹೋದ ವರ್ಷವೇ ನಮ್ಮ ಲಗ್ನ ನಿಶ್ಚಯವಾಗಿತ್ತೆಂದು ತಿಳಿಸಿದ್ದೆನಲ್ಲವೇ ಸತೀಶ? ನೀನು ಅದಕ್ಕೆ ನಿನ್ನ ಶುಭೇಚ್ಛೆಗಳನ್ನು ತಿಳುಹಿಸಿದ್ದೆ. ಆದರೆ.... ಸತೀಶ, ನಿನ್ನೆ ಅವನೂ ಹೋದ. ಅಯ್ಯೋ! ಮೇಲಿನಿಂದ ಜರ್ಮನಿ ಒಂದೇ ಸವನೆ ಬೆಂಕಿಯನ್ನು ಸುರಿಯುತ್ತಿದೆ. ನನ್ನನ್ನು ರಕ್ಷಿಸುವರಾರು? ನನ್ನಂತೆಯೇ ಇನ್ನೂ ಸಾವಿರ ಸಾವಿರ ಸ್ತ್ರೀಯರಿದ್ದಾರೆಂಬುದನ್ನು ಮರೆಯಬೇಡ. ಅವರೆಲ್ಲ ಭಾರತಕ್ಕೆ ಮೊರೆಯಿಟ್ಟು, ನಿನ್ನ ಕಡೆಗೆ ದೀನದೃಷ್ಟಿಯಿಂದ ನೋಡುತ್ತಿದ್ದಾರೆ! ನಾನು ಪ್ರೀತಿಸುವ ವಸ್ತುವೊಂದೂ ಉಳಿಯಲಿಲ್ಲ. ಆದರೂ ನನಗೆ ಬದುಕು ಏಕೆಂದು ಕೇಳುವೆಯಾ? ನಾನು ಪ್ರೀತಿಸುವ ಅತಿ ಮಹತ್ತರವಾದ ವಸ್ತುವೊಂದಿನೆ— ನನ್ನ ಬ್ರಿಟನ್! ಅದಕ್ಕಾಗಿ ನಾನು ಬದುಕಿದ್ದೇನೆ. ಅದೆಂದೂ ಜರ್ಮನಿಯ ರಾಕ್ಷಸರ ಕೈಗೆ ಸಿಕ್ಕಕೂಡದು!

ಸತೀಶ, ತೀರ ಆರ್ತಳಾಗಿ ಕೇಳುತ್ತೇನೆ? ಭಾರತೀಯರಾದ ನೀವು ನಮಗೆ ಸಹಾಯಮಾಡುತ್ತೀರಾ? ಮಾಡಬಾರದೇಕೆ? ಕಳೆದ ನೂರೈವತ್ತು ವರ್ಷಗಳಿಂದಲೂ ಬ್ರಿಟನ್ ಮತ್ತು ಭಾರತಕ್ಕೆ ಸಂಬಂಧವಿದೆಯೆಂದು, ನೀನೇ ಒಮ್ಮೆ ನನಗೆ ಹೇಳಿರಲಿಲ್ಲವೇ? ಹಿಂದೆ ನಾವು ಮಾಡಿದುದನ್ನೆಲ್ಲ ಮರೆತು, ಭಾರತೀಯ ಔದಾರ್ಯವು ನಮ್ಮನ್ನು ರಕ್ಷಿಸದೇ?

ವಿಚಾರಮಾಡಿ ನೋಡು! ಸತೀಶ, ನಿನಗೆ ಸರಿದೋರಿದ್ದನ್ನು ಮಾಡು; ಅದನ್ನು ನಿನ್ನವರಿಗೂ ಹೇಳು! ಬ್ರಿಟನ್ನಿನೊಡನೆ ಮೈತ್ರಿಯಿಂದಿರುವ ಸ್ವತಂತ್ರ ಭಾರತದ ಪ್ರಜೆಯಾದ ನಿನ್ನನ್ನು ಇನ್ನೊಮ್ಮೆ ಕಣ್ಣುತುಂಬ ನೋಡಿ ಆನಂದಿಸಬೇಕೆನ್ನುವ,

ನಿನ್ನ ಪ್ರಿಯಭಗಿನಿ,
ಜೇನ್."

ಪತ್ರ ಓದುವವರೆಗೂ ಕಣ್ಣುತುಂಬಿಬಂದಿದ್ದ ಕಂಬನಿಗಳೆರಡು ಪತ್ರದ ಮೇಲೆ ಬಿದ್ದು, ಅದನ್ನು ತೋಯಿಸಿದುವು. ಸತೀಶನು 'ಜೆನಿ....ಜೆನಿ' ಎಂದು ಎರಡೇಸಾರೆ ನುಡಿದ, ಮತ್ತೆರಡು ಕಂಬನಿ ಅವನ ಮೈಮೇಲೆ ಉದುರಿಬಿದ್ದು ಅವನ ಶರೀರವನ್ನೆಲ್ಲ ನಡುಗಿಸಿದುವು. ಅವನೇನು ಉತ್ತರ ಬರೆಯಬೇಕು?

ಗೀತಾಗಾಂಭೀರ್ಯ

ಶ್ರೀಕೃಷ್ಣನ ಸಮಾಜಧರ್ಮ

ಬರೆದವರು : 'ಶ್ರೀರಂಗ'

—This is the first book of its kind in Kannada, containing as it does a detailed, *rational* analysis of the main problem of the Gita. The author deserves to be warmly congratulated on the freshness and the originality with which he has viewed the conflict of Arjuna and explained the solution offered by Krishna.—

—*P. E. N.* ಸಭೆಯ ಪ್ರೊ. ಗೋಕಾಕ ಮತ್ತು ಮುಂಗಳಿ ಅವರ ವಿಮರ್ಶೆ.

ಬೆಲೆ ಸಾದಾಪ್ರತಿ ೩-೦-೦; ಉತ್ತಮಪ್ರತಿ ೩-೪-೦

ಜೀಕಾವವರು ಗ್ರಂಥಕರ್ತರಿಗಾಗಲಿ, ಜಯಂತ ಕಾರ್ಯಾಲಯಕ್ಕೆ ಅಗಲಿ ಬರೆದು ತರಿಸಿಕೊಳ್ಳಬೇಕು.

ಬಾಯಿ

—ಅಶಾಸ್ತ್ರೀಯ ವಿವೇಚನೆ—

(ಲಘು ಪ್ರಬಂಧ)

ಶ್ರೀ. ಮೊರಬ ರಘುನಾಥ ಬಿ.ಎ. (ಆನರ್ಸ್) ಸಿರಹಟ್ಟಿ

ಒಬ್ಬ :— ಏ, ಇಲ್ಲಿ ನೋಡೊ, ಅತ್ತಲಾಗ ಏನು ಮಾಡುತ್ತಿ! ಇಲ್ಲಿ ನೋಡು ಇತ್ಲಾಗ!

ಇನ್ನೊಬ್ಬ :— ಯಾಕ? ಅಂದ ಚೆಂಪ ಹುಡುಗಿನ್ನ ಕಂಡ ಕೂಡಲೆ ಬಾಯಾಗ ನೀರು ಬಿಟ್ಟವ್ಯಾಕ!

* * *

ತಮ್ಮ :— ನಾವು ಮಾತಾಡಬಾರದೇನೊ; ನೀಯಾಕ ಹೀಂಗ ಮಾಡಬೇಕು ಮತ್ರ ?

ಅಣ್ಣ :— ತಿರುತಿರುಗಿ ಅಂತಿಯೇನು? ಬಾಯಿ.....ಮುಚ್ಚು!

* * *

ಮುದುಕ :— ಆಷ್ಟ್ಯಾಕ ಬಡಕೊಳ್ಳತೀಯಿ ಮುಳ್ಳೂ ಅಂತ.....

ಮುದುಕಿ :— ಏನೋ ಇರಲಿ, ಸಾಯೂ ಕಾಲಕ್ಕ ಅಷ್ಟು ನೀರಾದರೂ ಬಿಡತಾರ ಬಾಯೊಳಗ!

* * *

" ಜಾಗೆ ಮಾತಾಡಬ್ಯಾಡೊ, ಅವರು ನಮ್ಮ ಸಾಹೇಬರು; ಬಾಯಿ ಬಿಗಿ ಹಿಡಿ! "

* * *

" ಏನು ಮಾಡೋದು, ಏನು ಹೇಳುವಾಕೆ ಇದ್ದಳೊ ಏನೊ, ಅಷ್ಟರೊಳಗೇ ಬಾಯಿ ಹೋತು! "

* * *

" ಏ, ಯಾಕ ಮಾತಾಡಲೊಲ್ಲೆ.....ಅಂ.....ಬಾಯಿ ಹೊಲಕೊಂಡಿದಿ ಏನು ? "

* * *

" ಬಾಡು ಮೇಲೆ ಕೈಯಾಕ ಇಟ್ಟುಕೊಂಡೀದಿ? ಏನೇನಾ ಆದು! ಅವನೇನು ನಿಜ ಅಂದ್ರ ಗುದ್ದದ ಮೇಲಿಂದ ಜಿಗಿಯೂದಿಲ್ಲ! "

* * *

"ಬರೇ, ಬಿ.ಏ., ಎಮ್.ಏ. ಆಡರೇನಾಯ್ತು? ಬಾಯಿ ಮುಂದಿರಬೇಕು. ಅಂದರ ಕೆಲಸ ಆಗತಾವ. ನೀವೆಲ್ಲ ಬಾಯಿ ಸತ್ತವರು!

* * *

" ಆದನ್ನೇನು ನೋಡುತ್ತಿ, ಏಳು ಅಂತಸ್ತಿನ ಮನೆ! ನೋಡುವ ಮುಂದ ಬಾಯೇನು ತಗದೀದಿ.....ನೊಣಾ ಬಿದ್ದಾವು! "

* * *

" ನಿನ್ನದು ಕರಿಬಾಯಿ ನೋಡು! ಹೋಗುವ ಮುಂದ ಎಲ್ಲಿ ಹೋಗತೀ ಅಂತ ಕೇಳಿದಿ; ಹೋದ ಕೆಲಸನೇ ಆಗಲಿಲ್ಲ! "

* * *

" ಏಳೋ ಕಿಸಬಾಯಿ! ಮುಂಬಯಿ ಅಂದರ ಸಣ್ಣ ಹಳ್ಳೀ ಅಂತ ತಿಳಕೊಂಡಿದಿಯೇನು? "

* * *

" ಇನ್ನೊಮ್ಮೆ ಹಾಂಗ ಮಾಡಿದಿ ಅಂದರ ನೋಡು.....ಬಾಯಿ ಬಾಯಿ ಜದೀತೀನಿ! "

* * *

" ಇದೇನನ್ನ ತಾಯಿಾ, ಈ ಹುಡುಗ! ಮುಂದಿ ಅಂಬೋಹಾಗಿಲ್ಲ, ಮುಕ್ಕಳೂ ಅಂಬೂಹಾಗಿಲ್ಲ, ಹಬ್ಬ ಅಂಬೋಹಾಗಿಲ್ಲ, ಹುಣ್ಣಿವಿ ಅಂಬೋಹಾಗಿಲ್ಲ, ಕೈಗೆ ಬಾಯಿಗೆ ಹಚ್ಚಿಬಿಡತ್ತದ. ನಾ ಮತ್ತೇನಾದರೂ ಅಂದರ ಅದೂ ನನ್ನ ಹೆಸರಲೆ....."

* * *

" ಮಹಾ ಭಂಡಿ ನನ್ನ ಹೆಂಡತಿ. ನನಗೆ ಆಕೀಗೆ ಬಾಯಿಗೆ ಬಾಯಿ ಹತ್ತೂ ಪ್ರಸಂಗ ಇತ್ತು ನೋಡಿರಿ, ಇನ್ನಮ್ಯಾಲೆ! "

" ತಪ್ಪೇನಾಯಿತು! "

* * *

" ಏನು ನಿನಗ ಅಡಿಕಿ ಕೊಟ್ಟಲ್ಲನ್ನ ? ಕಟಬಾಯಿಯೊಳಗ ಇಷ್ಟ ಘಡಚರ ಇಟ್ಟಕೊಂಡೀದಿ! "

* * *

"ಅವೇನಪಾ ಬಾಯಿ ಇದ್ದವ, ಎಲ್ಲಿಯಾದರೂ ನಾಳು ದುಡ್ಡು ತರತಾನ!"

* * *

" ನಾಳು ಮುಂದೀ ಮನಿಗೆ ಹೋಗಿ ಬಾಯಿ ತೆಗಿಯೂದೂ ಅಂದರ ನನ್ನ ಕಡೆಯಿಂದ ಆಗದು ನೋಡಿರಿ! "

* * *

ಈ ರೀತಿಯಾಗಿ ಬಾಯಿ ನಮ್ಮ ಬಳಗದಲ್ಲಿ, ನಮ್ಮ ಕುಟುಂಬದಲ್ಲಿ, ನಮ್ಮ ಸಮಾಜದಲ್ಲಿ, ಹೆಚ್ಚು ಪ್ರಸಿದ್ಧವಾಗಿದೆ; ಹೆಜ್ಜು ಬಳಕೆಯಲ್ಲಿದೆ. ಇದೇ ಇಷ್ಟು ಬಾಯ ಕೆಲಸವೆಂದು ತಿಳಿದು, ಅದರ ಮುಖ್ಯ ಕೆಲಸವನ್ನು ಮರೆಯಲಾಗದು. ಬಾಯಿಂದ ಮಾತು! ಬಾಯಿಂದ ಊಟ! ದೇಹ ಸಣ್ಣದಿದ್ದರೂ ಬಾಯಿ ದೊಡ್ಡದಿದ್ದವರು ಕೆಲವರು. ಬಾಯಿ ಸಣ್ಣದಿದ್ದರೂ ಕಂಠತ್ರಾಣ ಜೋರು ಇದ್ದವರೂ ಉಂಟು. 'ಬಾಯಿ ಸಣ್ಣದಿದ್ದರೇನೆ ಊಟ ಕಡಿಮೆ ಹೋಗುವುದು, ಬಾಯಿ ದೊಡ್ಡದಿದ್ದವರು ಹೆಚ್ಚು ಕೂಳು ನವಿಸುವವರು!' ಎಂಬುದು ತಾರ್ಕಿಕ ನಿಯಮವೆಂದು ತೋರಿದರೂ, ಹಲವರ ವಿಷಯದಲ್ಲದು ಅವ್ಯಾಪಕವಾಗಿರುವುದು. ದೇಹ ದೊಡ್ಡದಿದ್ದಾಗಲೆ, ಬಾಯಿ ಸಣ್ಣದಿರಬೇಕೆಂದಲ್ಲ; ಬಾಯಿ ದೊಡ್ಡದಿದ್ದಾಕ್ಷಣವೆ ಊಟ ಹೆಚ್ಚು ಒಳಸೇರಬೇಕೆಂದೂ ಅಲ್ಲ. ಇಷ್ಟೆ: ಬಾಯಿ ದೊಡ್ಡದಿದ್ದವರು, ದೊಡ್ಡತುತ್ತು ನುಂಗಬಹುದು. "Slow and steady wins the race" ಎಂಬ ಆಂಗ್ಲ ನಾಣ್ಣುಡಿಯನ್ನು ಆರಯ್ದರೆ, ಬಾಯಿ ಸಣ್ಣದಿದ್ದವರೆ ಹೆಚ್ಚು ಕೂಳು ನುಂಗಬಹುದೆಂದಾಗುವುದಲ್ಲವೆ?

ಬಾಯಿಯೊಳಗೂ ಅನೇಕ ತೆರ: ಕಟಬಾಯಿ, ತೆರಬಾಯಿ, ಕಿಸಬಾಯಿ, ಜೋಲುಬಾಯಿ, ಪುಟ್ಟಬಾಯಿ, ಕಲ್ಲುಪರಟಿಬಾಯಿ, ಅಡ್ಡಬಾಯಿ, ಎಂದು ಅನೇಕ ದೃಷ್ಟಿಗಳಿಂದ ನೋಡಬಹುದು. ಯಾವುದೇ ಬಾಯಿಯಾದರೂ, ಜೀವಿಗೆ ಬಾಯಿಯೆಂಬುದು ಮುಖ್ಯ. ಮುಖ್ಯವೆಂಬುದೆ 'ಮುಖ' ಎಂಬುದರಿಂದ ಬಂದಿರುವುದೆಂದಮೇಲೆ, ಮುಖ ಎಂಬುದೂ ಕೂಡ ಮುಖ್ಯವಾಗಿ 'ಬಾಯಿ' ಎಂದು ಸಂಸ್ಕೃತದಲ್ಲಿದ್ದುದು ಆಶ್ಚರ್ಯದ ಮಾತಲ್ಲ, ಅಥವಾ

ಮುಖದಲ್ಲಿ ಕಣ್ಣು, ಮೂಗು, ಬಾಯಿ, ಕೆನ್ನೆ, ಹುಬ್ಬು ಇವೆಲ್ಲ ಸೇರಿದ್ದರೂ, ಇವುಗಳಲ್ಲಿ ಮುಖ್ಯವಾದುದು ಬಾಯಿಯೆ ಅಲ್ಲವೆ? ಮುಖವೆ ಮುಖ್ಯವಲ್ಲವೆ? ಕರ್ನಾಟಕದ ಹಳಗನ್ನಡ ಸಾಹಿತ್ಯವನ್ನು ನಾವು ಬೆದಕಿ-ಕೆದಕಿ ನೋಡಿದರೆ, ಸಂಸ್ಕೃತ ಸಾಹಿತ್ಯದ ಇಡಿಯಾದ ಬೆಳಕು, ಸಂಸ್ಕೃತ ಶಬ್ದ, ಸಮಾಸ, ಅಲಂಕಾರ, ಉಕ್ತಿವೈಚಿತ್ರ್ಯ, ಆಚಾರ, ವಿಚಾರ, ಕೊನೆಯದಾದ ಶೈಲಿ, ಇವೆಲ್ಲ ಬಿಚ್ಚೊತ್ತಿದಂತೆ ಕನ್ನಡದಲ್ಲಿ ಇಡಿಯಾಗಿ ಇಳಿದಿರುವುದು ಕಂಡು ಬರುವುದು. ಹೀಗಿದ್ದಮೇಲೆ, ನಮ್ಮೀ ಬಾಯಿಯ ವಿಚಾರದಲ್ಲಾದರೂ ನಾವು ಸಂಸ್ಕೃತ ಅಲಂಕಾರಗಳನ್ನು ಪರಿಕಿಸಬಹುದಾಗಿದೆ. ಚಂದ್ರನಂತೆ ಮುಖ; ಚಂದ್ರನನ್ನು ನೋಡಿದಕೂಡಲೆ ಮನವು ಆನಂದ ಹೊಂದುವಂತೆ, ಬಾಯಿಯೂ ಆನಂದವನ್ನೀಯಬಹುದೆ? ಅದರಂತೆಯೆ ಕಮಲದಂತೆ ಮುಖ; ಕಮಲವು ಕಂಪನ್ನು ಬೀರುವಂತೆ, ಅದೇ ತಂಬುಲ ಜಗಿದ ಕೆಚ್ಚನೆಯ ಬಾಯಿ ಕೂಡ ಪರಿಮಳಿಸುವ ಕಂಪನ್ನು ಪರಡಬಲ್ಲುದೆ? ಕಮಲದಂತೆ ಮುಖ ಎನ್ನುವುದರಲ್ಲಿ ವೈಶಿಷ್ಟ್ಯವೇನಿದೆ? ಕಮಲದ ಒಂದು ವಿಕಸಿತ ಆಕಾರವು ಕೂಡ ಬಾಯಿಯಂತೆಯೆ ಅಲ್ಲವೆ? ಮುಖಕ್ಕೆ ಮುಖ್ಯಸ್ಥಾನವನ್ನು ಕವಿಗಳು ಕೊಟ್ಟಿರುವುದರಿಂದ, ಮುದ್ದುಗಳಲ್ಲಿ ಪ್ರೇಮದ್ಯೋತಕವಾದ ಬಾಯಿಗೀಗ ಮುದ್ದೇ ಮೇಲ್ಮೆಯನ್ನೂ ಪಡೆದಂತಿಲ್ಲವೆ?

ಓದುಗರೆ, ಇನ್ನು ಮೇಲಾದರೂ, ಮುಖವೆಂದಕೂಡಲೆ ಇಡಿಯ ಮುಖವೆಂದು ತಿಳಿಯದೆ, ಅದರೊಳಗೆ ಮುಖ್ಯವಾದ ಬಾಯಿಯಂದೆ ನಿಮ್ಮ ಮನಸ್ಸಿನಲ್ಲಿ ಮೂಡಬೇಕು. 'ಏನು ಚಂದ ಅದ ಆಕೆಯ ಮುಖ' ಎನ್ನುವುದಕ್ಕಿಂತ, 'ಏನು ಚಂದ ಅದ ಆಕೆಯ ಬಾಯಿ' ಎಂದಿಟ್ಟುಕೊಳ್ಳುವುದು ಲೇಸು! ಚಂದ್ರನಂತೆ ಬಾಯಿ, ಕಮಲದಂತೆ ಬಾಯಿ, ಎಂದು ಅಲಂಕಾರಗಳನ್ನು ಕನ್ನಡದಲ್ಲಿ ಸಾರ್ಪಡಿಸಿಕೊಂಡರೆ ತಪ್ಪೇನಿದೆ! ನಮ್ಮಲ್ಲಿ, ಎಂದರೆ ನಮ್ಮ ಏಂದೂದೇಶದಲ್ಲಿ, ಕವಿಗಳೆಲ್ಲರೂ ಗಂಡುಸರಾದರೇ ಹೊರತು, ಒಬ್ಬಿಬ್ಬರನ್ನುಳಿದು ಕವಯಿತ್ರಿಯರಾರೂ ಇಲ್ಲವೆಂದು ಸಹಜವಾಗಿ ಹೇಳಿಬಿಡಬಹುದು. ಕವಿಗಳು ಗಂಡುಸರಾದುದೆ ತಪ್ಪಾಯಿತು. ಇವರ ಕಾವ್ಯಗಳಲ್ಲಿ ಹೆಣ್ಣಿನ ಬಣ್ಣನೆಯೆ ಹಾಸು-ಹೊಕ್ಕಾಗಿ ಹಣೆದುಕೊಂಡಿದೆ. ಅದೇಕೆ, ವಿದ್ಯೆಯು ಕೂಡ ಸ್ತ್ರೀಲಿಂಗವಾಗಬೇಕಾಯಿತು; ಸರಸ್ವತಿಯು ಕೂಡ ಹೆಣ್ಣಾಗಬೇಕಾಯಿತು. ಕಾವ್ಯಗಳಲ್ಲಿ ಎದ್ದು ಕಾಣುವ ಹೆಣ್ಣಿನ ವರ್ಣನೆಯೆ ಪ್ರಾಮುಖ್ಯವಾದುದು ಅಷ್ಟೇನೂ ಅಸ್ವಾಭಾವಿಕವಲ್ಲ; ಸೃಷ್ಟಿಯ ನಿಯಮಕ್ಕೆ ವಿರುದ್ಧವಲ್ಲ; ಅಷ್ಟೇನು ಅಪ್ರಾಸಂಗಿಕವೂ ಅಲ್ಲ. ಆದುದರಿಂದ ಹೆಣ್ಣಿಗೆ ಮುಖ್ಯವಾದುದು ಬಾಯಿ. ಅದಕ್ಕಾಗಿ ಈಗ—ಈಗಳಾದರೂ, ಯಮುನಾಬಾಯಿ, ಗಂಗಾಬಾಯಿ, ಭಾಗೂಬಾಯಿ, ಜೀವೂಬಾಯಿ, ತಾರಾಬಾಯಿ, ಶಾರದಾಬಾಯಿ, ಸರಸೂಬಾಯಿ, ಹೇಮಾಬಾಯಿ, ಪ್ರೇಮಾಬಾಯಿ, ಎಂದು ಅನೇಕ ಬಾಯಿಗಳು, ಇಲ್ಲವೆ ಅನೇಕ ಬಾಯಿಯವರು—ನಮ್ಮ ಸಮಾಜದಲ್ಲಿ, ನಮ್ಮ ಜನಜೀವನದಲ್ಲಿ ಮುಗಿಬಿದ್ದಿರುವರು. ಇಷ್ಟಕ್ಕೂ ತೃಪ್ತಿಯಾಗದೆ, ಹಿಂದೆ ಹೆಸರಾದರೂ ಏಕೆಂದು, 'ಬಾಯಕ್ಕ' ಎಂದು ಹೆಸರು ಪಡೆದ ಮಹಿಳೆಯರೂ ಇದ್ದಾರೆ! ಇಂತಹ ಬಾಯಿಯಲ್ಲಿ ಹೆಣ್ಣುಮಕ್ಕಳು ಹೆಮ್ಮೆಹೊರುವುದೇಕೆ? "ಹೆಂಗುಸರ ಬಾಯಿ ಬಹಳೂ!" ಎಂದು ಗಂಡುಸರು ಶರಾಹೊಡೆದುದು ಇಲ್ಲಿ ಯೋಗ್ಯವೇ ಆಗಿದೆ. 'ಹೆಂಗುಸರ ಬಾಯಶಕ್ತಿಯಿಂದ ಗಂಡುಸರಶಕ್ತಿ ಎಲ್ಲವೂ ಕುಗ್ಗಿ ಮುಗ್ಗಿ ಹೋಗುವುದು' ಎಂದು ಮೇಲಿನ ನುಡಿಯ ತಿಳಿಯಾದ ಅರ್ಥವಲ್ಲದೆ ಮತ್ತೇನು! ಒಮ್ಮೆ ಒರ್ವ ಹೆಂಗುಸಿನ ಒಂದು ಬಾಯಿ ತೆರೆಯಿತೆಂದರೆ, ಗಂಡುಸರ ಅನೇಕ ತೆರೆದ ಬಾಯಿಗಳನ್ನು ಒಮ್ಮೆಲೇ ಮುಚ್ಚಿಬಿಡಬಹುದು. ಇಲ್ಲವೆ 'ಅಬಲಾನಾಂ ರೋದನಂ ಬಲಂ' ಎಂಬ ಸಂಸ್ಕೃತದ ಸುಭಾಷಿತವನ್ನಾರಯ್ದರೂ ಇದೇ ಅರ್ಥವೇ ಹೊಳೆಯುತ್ತದೆ. ಆ ರೋದನವು ಹೊರಡುವುದು ಬಾಯಿಂದಲ್ಲವೆ? ಸರಿ! ಇದರಿಂದ ಸಿದ್ಧವಾಗುವುದೆಂದರೆ, ಹೆಂಗುಸರಿಗೆ ಬಾಯಿಯೆ ಬಲ ಮತ್ತು ಮುಖ್ಯ. ಅಲ್ಲದೆ, ಎಲ್ಲ ಹೆಣ್ಣುಮಕ್ಕಳ ಹೆಸರಿನ ಮುಂದೆ 'ಬಾಯಿ' ಎಂದು ಸೇರಿಸುವುದು ಸಮಂಜಸ! ಬಾಯಿಯಿಂದ ಕೆಲಸವಾಗುವಷ್ಟು ಗಂಡುಸರ ಕೈಯಿಂದಾಗುವುದಿಲ್ಲ. ಹೆಂಗುಸರು ಮುಂದಕ್ಕೆ ಬರಲಿಕ್ಕೆ ಕಾರಣವೆಂದರೆ ಬಾಯಿಯೆ! ಬಾಯಿಯನ್ನೆ ಮುಂದುಮಾಡಲಿಕ್ಕೆ ಹತ್ತಿದ್ದಾರೆ. ಜರ್ಜೆಯಲ್ಲಿಯಾಗಲಿ, ಮಾತುಗಾರಿಕೆಯಲ್ಲಾಗಲಿ, ಬಾಯಿಯು ಜೇಕೇಜೇಕು. ಅಂದರೇನೆ ಆ ಜರ್ಜೆಯಲ್ಲಿ— ಆ ಮಾತುಗಾರಿಕೆಯಲ್ಲಿ— ಹದವುಂಟಾಗುವುದು; ಹುರುಪುಂಟಾಗುವುದು! ನ್ಯಾಯಸಭೆ, ನಗರಸಭೆ, ಕೋರ್ಟು-ಕಚೇರಿ, ರಾಜಕಾರಣ ಮುಂತಾದುವುಗಳಲ್ಲಿ, ಬಾಯಿಗಳು ಈಗೀಗ ಮುಂದೆ ಮುಂದೆ ನುಗ್ಗುತ್ತಿವೆ. ಸಾಮಾಜಿಕ, ನೈತಿಕ, ಜಾಗತಿಕ ಇಂತಹ ಅನೇಕ 'ಇಕ'ಗಳಲ್ಲಿ ಬಾಯಿ ಇಲ್ಲದಹೊರತು ಕೆಲಸವೆ ಆಗುವುದಿಲ್ಲ. ಇಲ್ಲವೆ ಗಂಡುಸರು ತಮ್ಮ ಹೆಸರಿನ ಮುಂದೆ 'ಭಾಯಿ' ಎಂದು ಇಟ್ಟುಕೊಂಡು, ಎಲ್ಲ ಸಾಂಸ್ಕೃತಿಕಸೂತ್ರಗಳನ್ನು ಕೈಯಲ್ಲಿ ತಕ್ಕೊಂಡರೂ ನಮ್ಮದೇನೂ ಅಡ್ಡಿ ಇಲ್ಲ.

ಓದುಗರೆ, ಅಥವಾ ಸಹೃದಯಿಗಳೆ, ಆದರಲ್ಲಿಯೂ ಗಂಡುಗಲಿಗಳೆ, ನಿಮ್ಮ ಈ ಸಂಸಾರವು ಸರಳವಾಗಿ ಸುಲಲಿತವಾಗಿ ಸಾಗಬೇಕಾದರೆ, ನಿಮ್ಮ ಹೆಸರಿನ ಮುಂದೆ 'ಬಾಯಿ' ಎಂದಾದರೂ ಇಟ್ಟುಕೊಳ್ಳಬಹುದು; ಇಲ್ಲವೆ ಹೆಂಗುಸರ ಹೆಸರಿನ ಮುಂದಿರುವ ಬಾಯಿಯನ್ನಾದರೂ ತೆಗೆದುಬಿಡಬೇಕು. ಆದಕ್ಕೂ ಮೊದಲು, ಇನ್ನು ಮುಂಬರುವ ಕವಿಗಳಿಗೆ 'ಹೆಂಗುಸರ ಬಾಯಿಯನ್ನು ವರ್ಣಿಸಲಾಗದು' ಎಂದು ಜೇಡಿಕೊಳ್ಳಬೇಕು. ಇಲ್ಲವೆ ಗಂಡುಸರೆಲ್ಲರೂ ಕಲಿಯುವುದನ್ನು ಬಿಟ್ಟು, ಹೆಂಗುಸರಿಗೆ ಓದು ಬರೆಹ ಕಲಿಸಿ, ಗಂಡುಸರ ಬಾಯಿಗಳನ್ನು ವರ್ಣಿಸಲಿಕ್ಕಾದರೂ ಪುರ್ಜೆ ಜೇಕು. ಅಥವಾ ನಾನು ಬರೆದಿರುವ ಬರೆಹವನ್ನು ನೀವು ಬಾಯಿಮುಚ್ಚಿಕೊಂಡು ಓದಿದರೂ ಅಡ್ಡಿಯಿಲ್ಲ; ಆದರೆ ಇದರ ವಿಷಯಕ್ಕೆ ನಿಮ್ಮ ನಿಮ್ಮ ಹೆಂಡಂದಿರೆದುರಿಗೆ ಬಾಯಿಬಿಚ್ಚಬಾರದು. ಇದೊಂದು ಕೊನೆಗೆ ಎಚ್ಚರಿಕೆ ಕೊಟ್ಟು, ನಾನು ತೆರೆದ ಬಾಯಿಯನ್ನು ಮುಚ್ಚುವೆ!

ಸಾಹಿತ್ಯದ ಜೀವಾಳ

(ಷೋಪನ್‌ಹೌರನ ಪ್ರಬಂಧಗಳು).
ಅನುವಾದಕ :— ಗೊರೂರ ರಾಮಸ್ವಾಮಿ
ಐಯಂಗಾರ್ ಅವರು. ಡೆಮ್ಮಿ ೪ ಪ
೪೮ ಪುಟಗಳು. ಬೆಲೆ ೧೦ ಆಣೆ.
ಪ್ರಕಾಶಕರು :— ಮೈಸೂರು, ಕಾವ್ಯಾಲಯ.

ಈ ಚಿಕ್ಕ ಗ್ರಂಥವು ಜರ್ಮನಿಯ ಸುಪ್ರಸಿದ್ಧ ವೇದಾಂತಿಯಾದ ಷೋಪನ್‌ಹೌರನ ಸಾಹಿತ್ಯ ವಿಮರ್ಶೆಯನ್ನು ಕುರಿತ ಪ್ರಬಂಧಗಳ ಅನುವಾದ. ಅನುವಾದಕರು ಕನ್ನಡ ಸಾಹಿತ್ಯವಲ್ಲಿ ನೇಲ್ಮೆವೆತ್ತವರು : ಶ್ರೀ. ಗೊರೂರ ರಾಮಸ್ವಾಮಿ ಐಯ್ಯಂಗಾರರು.

ಕನ್ನಡಸಾಹಿತ್ಯದಲ್ಲಿ ಸಾಹಿತ್ಯತತ್ತ್ವಗಳನ್ನು ಕುರಿತು ವಿಚಾರಿಸತಕ್ಕ ಗ್ರಂಥಗಳು ತೀರ ಕಡಿಮೆಯೆನ್ನುವಾಗ, ಪರಭಾಷೆಯ ಯಾವ ಎರವಲೂ ಬೇಕೆ. ಸಂಸ್ಕೃತದಿಂದ ನಾವು ರಸ-ಅಲಂಕಾರಗಳುಳ್ಳ ಅನೇಕ ಗ್ರಂಥಗಳನ್ನು ಹಲವಾರು ವರುಷಗಳಿಂದ ಕನ್ನಡಿಸಿಕೊಂಡಿದ್ದರೂ ಲೇಖನ ಕಲೆ, ಸಾಹಿತ್ಯದ ಉದ್ದೇಶ, ಗ್ರಂಥಗಳ ವ್ಯಾಸಂಗ ಈ ಮೊದಲಾದ ವಿಷಯಗಳ ಬಗ್ಗೆ ಪಾಶ್ಚಾತ್ಯ ಸಾಹಿತ್ಯದಿಂದಲೆ ನಮಗೆ ಒಳ್ಳೆಯ ನೆರವು ದೊರಕಿದೆಯೆಂದರೆ ತಪ್ಪಾಗಲಿಕ್ಕಿಲ್ಲ. ಆ ಪ್ರಕಾರವಾಗಿ ಇಲ್ಲಿ ಬಂದಂತಹ (೧) ಲೇಖನ ಕಲೆ, (೨) ತನ್ನಿಷ್ಟಕ್ಕೆ ತಾನು ಆಲೋಚನೆ ಮಾಡುವುದು. (೩) ಗ್ರಂಥಗಳು ಮತ್ತು ಆವುಗಳ ವ್ಯಾಸಂಗ, (೪) ಶೈಲಿ ಎಂಬೀ ಪ್ರಕರಣಗಳು ಅತ್ಯಂತ ಉಪಯುಕ್ತವಾದುವಾಗಿವೆ. ವಿಮರ್ಶಾಶಾಸ್ತ್ರದಲ್ಲಿ ಉದ್ದಾಮತರಗತಿಯ ಸ್ವತಂತ್ರ ಸಾಹಿತ್ಯದ ನಿರ್ಮಿತಿ ಆಗುವವರೆಗೂ ಪರಭಾಷಾ ಸಾಹಿತ್ಯಕ್ಕೆ ಮೊರೆಹೊಗದೆ ನಮಗೆ ಮುಕ್ತಿಯಿಲ್ಲ.

ಸಾಹಿತ್ಯ-ಕಲೆಗಳ ತತ್ತ್ವಗಳು ತ್ರಿಕಾಲಾಬಾಧಿತವೆಂದರೂ, ಹಲಕೆಲವು ವಾದಗ್ರಸ್ತ ವಿಷಯಗಳು ನಡುನಡುವೆ ತಲೆಯೆತ್ತುವುದರಿಂದ, ಒಂದು ಕಾಲದ—ಒಂದು ಯುಗದ ತತ್ತ್ವಗಳು ಇನ್ನೊಂದು ಕಾಲಕ್ಕೆ ವಿಪರೀತವೆನಿಸಬಹುದು. ಹಾಗೆ, ಪೋಪನ್‌ಹೌರನ ಕಾಲದ ಕೆಲವು ನಿಯಮಗಳು ಇಂದಿನ ದೃಷ್ಟಿಗೆ ಕೆಲಕೆಲವು ರೀತಿಯಲ್ಲಿ ಲೋಪದೋಷಯುಕ್ತವಾಗಿ ತೋರಬಹುದು. ಅಂತೆಯೆ ಇಂದು ಕನ್ನಡದ ಪುಟ್ಟ ಗಾವರೂ— ಬೆಳೆದಷ್ಟು ವಾಚನಾಭಿರುಚಿ ಹುಟ್ಟಿದಷ್ಟು ಸಾಮಾನ್ಯ ಸಾಹಿತ್ಯ ಬೇಕೆನ್ನುವಾಗ, ಪ್ರಪಂಚಾವಲೋಕನ ಮಾಡಿ ವಿಶ್ವತತ್ತ್ವಗಳ ಸ್ವಯಂಚಿಂತನೆ ಮಾಡುವುದಕ್ಕಿಂತ ಪುಸ್ತಕ ಓದಿ ವೇದಾಂತಿಯಾಪವನ ಬುದ್ಧಿ 'ನಕಲಿನ ನಕಲು'—ಎಂದು ಪ್ರತಿಪಾದಿಸುವ ತತ್ತ್ವವು ನಮಗೆ ಅಸತ್ಯವೆನಿಸದಿದ್ದರೂ ಅಪ್ರಯುಕ್ತವೆನಿಸಬಹುದು. ಇದೇ ರೀತಿಯಾಗಿ ಪುಸ್ತಕಗಳಿಗಿಂತ ಪ್ರಪಂಚಾವಲೋಕನಕ್ಕೇ ಕೊಟ್ಟ ಪ್ರಾಧಾನ್ಯ, ಲೇಖನ ಕಲೆಯಲ್ಲಿ ನಿರೂಪಿಸುವ ತೀರ ಅತ್ಯುಚ್ಚ ತರಗತಿಯ ಪವಿತ್ರಧರ್ಮಗಳು ಪಾಚಕವರ್ಗದಲ್ಲಿ ಪೃಚ್ಛೆಯನ್ನೆಬ್ಬಿಸಬಹುದು. ಶೈಲಿಯ ಬಗ್ಗೆ ಹೇಳಿದ-ಸಹಜತೆ, ಸ್ಪಷ್ಟತೆ ಸತ್ಯಪ್ರಿಯತೆಗಳ ಮಾತು ಎಲ್ಲರಿಗೂ ಮಾನ್ಯವಾಗತಕ್ಕುವೆ.

ಕೇವಲ ತತ್ತ್ವಗಳ ಮಟ್ಟಿಗೆ ಷೋಪನ್‌ಹೌರನ ವಿಚಾರಗಳನ್ನು ಮಂಡಿಸುತ್ತ, ಅಲ್ಲಲ್ಲಿ ಯುಕ್ತಪಾದಲ್ಲಿ ನಿಸ್ಮೃತವಾದ ಉಲ್ಲೇಖನಗಳೊಂದಿಗೆ, ಇಂದಿನ ಕನ್ನಡ ಸಾಹಿತ್ಯದ ಸರ್ವತೋಮುಖವಾದ ಅಭಿವೃದ್ಧಿಯ ದೃಷ್ಟಿಯನ್ನಿಟ್ಟುಕೊಂಡು, ಅನುವಾದಕರು ತಮ್ಮ ವಿಚಾರ-ನಿಮರ್ಶೆಗಳನ್ನು ಮಂಡಿಸುತ್ತ ಸ್ವತಂತ್ರವಾದ ಶೈಲಿಯಲ್ಲಿಯೇ ಬರೆದಿದ್ದರೆ ಇನ್ನೂ ಹೆಚ್ಚು ಉಪಯುಕ್ತವಾಗಬಹುದಿತ್ತು. ಶಬ್ದರಃ ಅನುವಾದವಾಗಿರುವುದರಿಂದ ಅಲ್ಲಲ್ಲಿ ಅಸ್ಪಷ್ಟತೆ ಮೈದೋರಿದೆ. ಪುಸ್ತಕವೂ ತೀರ ಚಿಕ್ಕದಾಗಿದೆ; ಮುದ್ರಣದ ಅಂದವೂ ಬಂದಿಲ್ಲ. ಏನೋ ಅನುವಾದ ಮಾಡಿಟ್ಟ ಮಾತುಗಳನ್ನು ಹೇಗೋ ಅಚ್ಚುಹಾಕಿ ಪುಸ್ತಕರೂಪಕ್ಕಿಳಿಸಿದಂತಿದೆ. ಇಷ್ಟಾಪದರೂ ಇದೊಂದು ಉಪಕಾರನೇ.

—ಎನ್ಕೆ.

ಚಿಗುರು

ಧಾರವಾಡದ ಲಲಿತ ಸಾಹಿತ್ಯಮಾಲೆಯ ಮೊದಲನೆಯ ಕುಸುಮ, ಇದೊಂದು ೯ ಕತೆಗಳ ಕಥಾ ಮಂಜರಿ.

ಈ ಸಂಕಲನದಲ್ಲಿ, ದಿವಂಗತಾ ಗೌರಮ್ಮನವರ (ಶ್ರೀಮತಿ ಬಿ. ಟಿ. ಕೃಷ್ಣ) ಮೊಟ್ಟ ಮೊದಲಿನ ಕತೆಯೂ ಇದೆ; ಕಟ್ಟ ಕಡೆಗೆ-ಅಗಲುವಾಗ-ಬರೆಯಲಾರಂಭಿಸಿ ಇನ್ನು ಪೂರ್ಣ ಮುಗಿಯದಿದ್ದ ಕತೆಯೂ ಇದೆ. ಇದರಲ್ಲಿ ಬೇರೆ ಬೇರೆ ಜೀವನದ ಚಿತ್ರಗಳಿರುವುದರಿಂದ ಇವರು ಜೀವನದ ಕಡೆಗೆ ಬೀರಿದ ಸೂಕ್ಷ್ಮ ದೃಷ್ಟಿಯನ್ನು ನಾವು ಇಲ್ಲಿ ಕಾಣಬಹುದು. ಈ ಎಲ್ಲ ಕತೆಗಳನ್ನು ಹೇಳುವ ರೀತಿ ಬೇರೆಯಾಗಿದ್ದರೂ ಕತೆಗಳ ಜೀವಾಳ ಮಾತ್ರ ಒಂದೇ; ಪ್ರಣಯ! ಪ್ರಣಯದಿಂದ ಪ್ರಳಯವನ್ನು ಕಂಡ ಪಾತ್ರಗಳೂ ಇದರಲ್ಲಿವೆ. ಆದರಿಂದಲೇ ಸ್ವರ್ಗ ಸಂತೋಷದ ಜೀವನವನ್ನನುಭವಿಸಿದ ಪಾತ್ರಗಳೂ ಇವೆ. ಇದರಲ್ಲಿಯ 'ಪುನರ್ವಿವಾಹ' ಅವರ ಮೊದಲನೆಯ ಕತೆ. ಆ ಕತೆಯನ್ನೇ ಓದಿದಾಗ, ಅವರದೇ ಒಂದಾದ ರೀತಿ, ಸನ್ನಿವೇಶಗಳನ್ನು ನಿರ್ಮಿಸುವ ವೈಶಿಷ್ಟ್ಯ, ಪಾತ್ರಗಳ ಕೂಡ ನಮ್ಮನ್ನು ಒಂದು.

(೧೯೬ನೆಯ ಪುಟಕ್ಕೆ ಮುಂದುವರಿದುದು.)

ಸಾದರ ಸ್ವೀಕಾರ

೩೮. **ಅಕ್ಕಾಜಿ** (ಅನುವಾದಿತ ಕಾದಂಬರಿ)— ಮೂಲ ಬಂಗಾಲಿ ಕಾದಂಬರಿಕಾರರು ದಿವಂಗತ ಶ್ರೀ. ಶರಚ್ಚಂದ್ರ ಚಟ್ಟೋಪಾಧ್ಯಾಯರು. ಅನುವಾದಕರು ಶ್ರೀ. ಪೇವುಂಡಿ ಮಲ್ಲಾರಿಯನರು. ಧಾರವಾಡದ ಲಲಿತ ಸಾಹಿತ್ಯ ಪಾಲೆಯ ಎರಡನೆಯ ಹೊತ್ತಿಗೆ. ಕ್ರೌ.ಆ. ೧೦ ಪುಟ. ಬೆಲೆ ೦-೧೨-೦.

೩೯. **ಸರೋಜನಳಿನಿ** (ಜೀವನ ಚರಿತ್ರೆ)— ಮೂಲ ಇಂಗ್ಲಿಷಿನಲ್ಲಿ ಶ್ರೀಮಾನ್ ಜಿ. ಎಸ್. ದತ್ತ ಐ. ಸಿ. ಎಸ್ ಅವರು ಬರೆದುದನ್ನು, ಶ್ರೀಮತಿ ಜಯಲಕ್ಷ್ಮಿ ಶ್ರೀನಿವಾಸನ್ ಅವರು ಕನ್ನಡದಲ್ಲಿ ಅನುವಾದಿಸಿರುವರು. ಕ್ರೌ. ಆ. ೨೦+೧೮೮ ಪುಟ. ಬೆಲೆ? ಪ್ರಕಾಶನ ಸ್ಥಲ: ಕರ್ನಾಟಕ ಪ್ರಕಟನಾಲಯ, ಬೆಂಗಳೂರು.

೪೦. **ನಯಸೇನ** (ಕವಿ-ಕಾವ್ಯ ಸಂಜಯ) ಬರೆದವರು— ಶ್ರೀಮಾನ್ ಬಿ. ವೆಂಕಟಸುಬ್ಬಯ್ಯ ಎಂ. ಎ., ಬಿ. ಟಿ. ಅವರು. ಮೈಸೂರು ವಿ. ವಿ. ನಿಲಯದ ಪ್ರಚಾರ ಪುಸ್ತಕಮಾಲೆಯ ೪೧ನೆಯ ಪುಷ್ಪ. ಫೂ. ಕ್ಯಾ. ಆ. ೬೦ ಪುಟಗಳು. ಬೆಲೆ ೦-೩-೦.

ಕನ್ನಡ ಪುರಾತನ ಕವಿಗಳಲ್ಲಿ ನಯಸೇನನಿಗೆ ಒಂದು ವಿಶಿಷ್ಟವಾದ ಸ್ಥಾನವಿದೆ. ಆತ ಬದುಕಿ ಬಾಳಿದ ಕಾಲ ಕ್ರಿ. ಶಕದ ೧೨ನೆಯ ಶತಮಾನದ ಪ್ರಾರಂಭ; ಸ್ಥಳ ಈಗ ಧಾರವಾಡ ಜಿಲ್ಲೆಗೆ ಸೇರಿರುವ 'ಮುಳುಗುಂದ' ಎಂಬ ಗ್ರಾಮ. ಈ 'ನಯಸೇನ ಮುನೀಂದ್ರ'ನ ಕಾಲದಲ್ಲಿ ಮುಳುಗುಂದ ಜೈನಧರ್ಮದ ಕೇಂದ್ರಸ್ಥಳವಾಗಿರಬೇಕು. ಈಗಲೂ ಅಲ್ಲೊಂದು ಸುಂದರವಾದ ಪುರಾತನ ಬಸದಿ ಯಿದೆ. ಅಲ್ಲಿಯ ಮುಖ್ಯ ಜವಾನುದಾರರ ಪಳೆಯ ಮನೆತನವೂ ಜೈನಮತೀಯರದಾಗಿದೆ.

ನಯಸೇನ ಮಿಕ್ಕ ಕವಿಗಳಂತೆ ಮಹಾಕಾವ್ಯ ಬರೆಯಲು ಹೊರಟವನಲ್ಲ. ಅವನ ಗ್ರಂಥದ ಲಕ್ಷ್ಯ ಮತಪ್ರಚಾರ. ಎಂತಲೆ ಜೈನ ಸಿದ್ಧಾಂತದ, ಆಚಾರ-ವಿಚಾರಗಳ ಮೇಲ್ಮೆಯನ್ನು ತಿಳುಹುವಂತೆ, ಬೇರೆಬೇರೆ ಕತೆಗಳನ್ನು ಕಟ್ಟಿ ಹೇಳಿದ್ದಾನೆ. ನಯಸೇನನಿಗೆ ವಿಶಿಷ್ಟ ಸ್ಥಾನವನ್ನು ಕೊಡಬೇಕಾದುದು ಆತನ ಸಾಹಿತ್ಯ ಪಾಂಡಿತ್ಯಕ್ಕಲ್ಲ, ಕಥಾವಸ್ತುವಿಗಾಗಿ ಅಲ್ಲ, ಆತನ ಭಾಷಾಪದ್ಧತಿಗೆ. ತನ್ನ ಕಾಲದ ಗಾದೆ, ನಾಡನುಡಿ, ದೇಸಿನುಡಿ ಇವುಗಳನ್ನು ಸೂರೆಸೂರೆ ಮಾಡಿದ್ದಾನೀತ.

ಪ್ರಸ್ತುತ ಪುಸ್ತಕ, ಕವಿಯನ್ನೂ ಕಾವ್ಯವನ್ನೂ ಸ್ವಲ್ಪದರಲ್ಲಿಯೆ ಚೆನ್ನಾಗಿ ಪರಿಚಯ ಮಾಡಿಕೊಡಬಲ್ಲದು. ಇಂತಹ ಪುಸ್ತಕವನ್ನೋದಿದಾಗ, ಮೂಲ ಗ್ರಂಥಹೇಗಿದೆಯೆಂಬುದನ್ನು ನೋಡಬೇಕೆಂಬ ಅಪೇಕ್ಷೆ ವಾಚಕರಿಗುಂಟಾದರೆ ಸಾಕು, ಪ್ರಸ್ತುತ ಪುಸ್ತಕ ಅಂತಹ ಅಪೇಕ್ಷೆಯನ್ನು ಖಂಡಿತ ಉಂಟುಮಾಡುವುದಾಗಿದೆ.

೪೧. **ಮೊಗವೀರ** (ತ್ರೈಮಾಸಿಕ ಪತ್ರಿಕೆ):— ಸಂಪಾದಕರು ಶ್ರೀಮಾನ್ ಎಚ್.ಕೆ.ಎ. ಕುಂದರನ್ ಅವರು. ಮುಂಬಯಿಯ ಮೊಗವೀರ ವ್ಯವಸ್ಥಾಪಕ ಮಂಡಲಿಯ ಮುಖಪತ್ರಿಕೆಯಿದು. ಕ್ರೌ. ೧೮ ಪುಟಗಳು. ಬಿಡಿಸಂಚಿಕೆಗೆ ೦-೩-೦.

ಸಂಪಾದಕೀಯದಲ್ಲಿ 'ಮೊಗವೀರನ ಮನದಲ್ಲಿ ಏನಿದೆ?' ಎಂಬ ಮಾತನ್ನು ನಿವೇದಿಸಲಾಗಿದೆ. ಸ್ವಸಮಾಜದ, ಅನುಷಂಗಿಕವಾಗಿ ನಾಡಿನ-ನುಡಿಯ-ಸೇವೆಯನ್ನು ಹೇಗೆ ಹೇಗೆ ಮಾಡಬೇಕಾಗಿದೆಯೆಂಬುದರ ಸ್ಪಷ್ಟವಾದ ವಿವೇಚನೆಯಿದೆ. ಅಲ್ಲದೆ ವಿಚಾರ ಪ್ರಚೋದಕವಾದ ಬೇರೆ ಪ್ರಬಂಧ, ಕಥೆ, ಹರಟೆಗಳಿವೆ. ಕೊನೆಗೆ ಮಂಡಳಿಯ ಕಾರ್ಯಾಲಯದ ವರದಿಯೂ ಇದೆ. ತಾ. ೧೯-೬-೪೪ ರಲ್ಲಿ ಶ್ರೀ. ಕೆ. ಎಚ್. ಕಬ್ಬೂರ್ ಅವರ ಅಧ್ಯಕ್ಷತೆಯಲ್ಲಿ, ಮಂಡಲಿಯ ೬೬ನೆಯ ವಾರ್ಷಿಕ ಮಹೋತ್ಸವವು ವಿಶೇಷ ವಿಜೃಂಭಣೆಯಿಂದ ಜರುಗಿದುದು ಸಂತೋಷದ ಸಂಗತಿಯು.

೪೨. **The Indian P. E. N.** (ಇಂಗ್ಲಿಷ್ ಮಾಸಪತ್ರಿಕೆ):—ಸಂಪಾದಕರು: ಶ್ರೀಮತಿ ಸೋಫಿಯಾ ವಾಡಿಯಾ ಅವರು. ಕ್ರೌ. ೧೮ ಪುಟಗಳು, ಬಿಡಿಸಂಚಿಕೆಗೆ ೦-೩-೦. **ಪ್ರಕಾಶನಸ್ಥಳ**: ಆಲ್ ಇಂಡಿಯಾ ಪಿ. ಇ. ಎನ್. ಆಫೀಸ್ 'ಆರ್ಯ ಸಂಘ', ನಾರಾಯಣ ವಾಛೋಳಕರ ರೋಡ್, ಮಲಬಾರ್‌ಹಿಲ್, ಮುಂಬೈ.

೪೩. **ಸಂವಾದಮಾಲೆ** (ಗಾಂಧೀ ಸಾಹಿತ್ಯ ೪): —ಅನುವಾದಕರು ಮತ್ತು ಸಂಪಾದಕರು ಶ್ರೀಮಾನ್ ಸಿದ್ದವನಹಳ್ಳಿ ಕೃಷ್ಣಶರ್ಮ ಅವರು. ಪ್ರಕಾಶನ ಸ್ಥಳ: ಗಾಂಧೀ ಸಾಹಿತ್ಯ ಭಾಂಡಾರ, ಬೆಂಗಳೂರು. ಕ್ರೌ. ಆ. ೧೬೦ ಪುಟ, ಬೆಲೆ: ೧-೪-೦.

೪೪. **ಕೌಟಿಲ್ಯ** (ವ್ಯಕ್ತಿ ಕೃತಿ ಪರಿಚಯ):—ಲೇಖಕರು ಶ್ರೀ. ಎಂ. ವಿ. ಕೃಷ್ಣರಾಪ, ಎಂ. ಎ., ಬಿ. ಟಿ. ಫೂ. ಕ್ಯಾ. ಆ. ೬೨ ಪುಟ. ಬೆಲೆ ೦-೩-೦. ಮೈಸೂರು ವಿ. ವಿ. ನಿಲಯದ ಪ್ರಚಾರ ಪುಸ್ತಕಮಾಲೆಯ ೪೨ನೆಯ ಗ್ರಂಥ.

೪೫. **ವೀರಶೈವರಲ್ಲಿ ಜಾತಿಭೇದಗಳಿಲ್ಲ** (ಪರಿಚಯಾತ್ಮಕ):— ಲೇಖಕರು ದಿವಂಗತ ವಿ. ಬಿ. ಬಿಳೇಆಂಗಡಿ, ಬಿ. ಎ., ಎಲ್‌ಎಲ್. ಬಿ., ವಕೀಲರು, ಹುಬ್ಬಳ್ಳಿ. ೧೯೩೮ ರಲ್ಲಿ ಪ್ರಸಿದ್ಧವಾದ ಎರಡನೆಯ ಆವೃತ್ತಿಯ ಪ್ರತಿಯಿದು. ಡೆ. ಆ. ೬೮ ಪುಟಗಳು. ಬೆಲೆ ೦-೪-೦.

೪೬. **ಗುರುಧರ್ಮನಿರೂಪಣೆ**:— (ವಿವೇಚನಾತ್ಮಕ ಗ್ರಂಥ). ಲೇಖಕರು ದಿವಂಗತ ವಿ. ಬಿ. ಬಿಳೇಆಂಗಡಿ ವಕೀಲರು, ಹುಬ್ಬಳ್ಳಿ. ೧೯೩೬ನೆಯ ಇಸ್ವಿಯಲ್ಲಿ ಪ್ರಕಟವಾದುದು. ಡೆ. ಆ. ೮೬ ಪುಟ. ಬೆಲೆ ೧-೦-೦.

೪೭. **ಕಲ್ಯಾಣದ ಬಸವಣ್ಣನೇ ವೀರಶೈವ ಸಂಸ್ಥಾಪನಾಚಾರ್ಯನೂ ಪ್ರಕಾಶಕನೂ ಅಹುದು** (ನಿಬಂಧ):— ಇದನ್ನೂ ದಿವಂಗತ ಬಿಳೇಅಂಗಡಿ ವಕೀಲರೇ ಬರೆದಿದ್ದಾರೆ. ೧೯೩೨ ನೆಯ ಇಸ್ವಿಯಲ್ಲಿ ಪ್ರಕಟವಾಗಿದೆ. ಡೆ. ಅ. ೨೭ ಪುಟಗಳು. ಬೆಲೆ?

೪೮. Veerashaiva Philosophy of the Shivagamas :— (ತತ್ತ್ವವಿಚಾರ ಗ್ರಂಥ). ಬರೆದವರು ದಿವಂಗತರಾದ ಸಿದ್ಧರಾಮಪ್ಪಾ ದುಂಡಪ್ಪಾ ಪಾಪಟೆ ಬಿ. ಎ., ಎಲ್.ಎಲ್. ಬಿ., ವಕೀಲರು ಹುಬ್ಬಳ್ಳಿ. ದಿವಂಗತ ಎ. ಬಿ. ಬಿಳೇಅಂಗಡಿ ವಕೀಲರು ೧೯೩೭ ರಲ್ಲಿ ಪ್ರಕಟಿಸಿದುದು. ಡೆ. ಅ. ೬೮ ಪುಟ; ಬೆಲೆ ೧–೦–೦.

೪೯. **ಬಸವಾದಿ ಪ್ರಮಥ ಮಾರ್ಗ ಸೃಷ್ಟೀಕರಣ** (ಮತ ವಿವೇಚನೆ). ಬರೆದವರು:— ಶ್ರೀ. ಗಂಗಾಧರಪ್ಪಾ ನಂಗಪ್ಪಾ ಸಾಜೋಜಿ, ಕಳಕವಾಡಿ ಬೆಳಗಾಂವಿ. ೧೯೩೭ ರಲ್ಲಿ ಅಚ್ಚಾಗಿ ಪ್ರಕಟವಾದುದು. ಡೆ. ಅ. ೪೦ ಪುಟ. ಬೆಲೆ?

(ಸಂ. ೪೫ ರಿಂದ ೪೯ ವರೆಗಿನ ಗ್ರಂಥಗಳು, ದಿವಂಗತ ಬಿಳೇಅಂಗಡಿ ವಕೀಲರ ಚಿರಂಜೀವರ ಮುಖಾಂತರ ನನ್ನ ಕಡೆಗೆ ಬಂದಿವೆ.)

೫೦. **ದಿ ಕುಮಟಾ ಸೆಂಡಲ್ ಉಡ್ ಪ್ರೊಡ್ಯೂಸರ್ಸ್ ಕೋ-ಆಪರೇಟಿವ್ ಎಸೋಸಿಯೇಶನ್ ಲಿಮಿಟೆಡ್** ಕುಮಟಾ, ಜಿಲ್ಲಾ ಉತ್ತರ ಕನ್ನಡ— ಈ ಸಂಸ್ಥೆಯ ೧೯೪೧–೪೨ನೆಯ ವರ್ಷದ ವರದಿ.

೫೧. **ವಿಭೂತಿ** (ತೆಲುಗು ಮಾಸಪತ್ರಿಕೆ):— ೪ನೆಯ ವರ್ಷದ ೧–೨ ಸಂಯುಕ್ತ ಸಂಚಿಕೆ. ಸಂಪಾದಕರು, ಪಂಡಿತ ಚಿದಿರೆಮಠದ ವೀರಭದ್ರ ಶರ್ಮ, ಸಿಕಂದರಾಬಾದ್. ಕ್ರೌ. ೪೮ ಪುಟಗಳು; ವಾರ್ಷಿಕ ಚಂದಾ ೨–೮–೦. ಸಂಪಾದಕರೇ ಪ್ರಕಾಶಕರು.

೫೨. **ಬೆಳ್ಗಾಂವಿ ಜಿಲ್ಲಾ ಸಹಕಾರಿ ಹೊಲ ಒತ್ತೀ ಬ್ಯಾಂಕ್ ಲಿಮಿಟೆಡ್**, ಬೆಳಗಾಂವಿ, ಈ ಸಂಸ್ಥೆಯ ೭ನೆಯ ವರ್ಷದ ವರದಿ. ಮ್ಯಾನೇಜರರು ಶ್ರೀ. ಬ. ಮ. ಏಳುಕೋಟಿ ಅವರು.

೫೩. **ಸಂದೇಶ** (ಮೋಟರ್ ಕಾಂಗ್ರೆಸ್ ಸಂಚಿಕೆ):— ಸಂಕಲ್ಪಕರು ಮತ್ತು ಸಂಯೋಜಕರು ಶ್ರೀ ಮಾನ್ ಗೋಖಲೆ ಕೇಶವರಾಯರು. ಸಂಪಾದಕರು ಶ್ರೀಮಾನ್ ಗೋ. ಅ. ದೇಶಪಾಂಡೆ. ಬೆಳಗಾಂವಿ. ವಿಶೇಷ ಸಂಪಾದಕರು ಶ್ರೀಮಾನ್ ಚಿಕ್ಕೋಡಿ ಅನಂತರಾಯರು. ಪ್ರಕಾಶನ ಸ್ಥಳ: ಸಂದೇಶ ಕಾರ್ಯಾಲಯ, ಬೆಳಗಾಂವಿ. ಕ್ರೌ. ಫೂ. ೪೦ ಪುಟ. ಬೆಲೆ ೧–೬–೦.

೫೪. **ಸನುರಸಂಜಯ** (ಪಕ್ಷಪತ್ರಿಕೆ) ಸಂಪಾದಕರು:— ಶ್ರೀ. ಸಿ. ಐ. ಹಿರೇಮಠ ವಕೀಲರು, ಹುಬ್ಬಳ್ಳಿ. ಕ್ರೌ. ಫೊ. ೪ ಪುಟ. ವಾರ್ಷಿಕ ಚಂದಾ ೧–೯–೦. ಇದರ ಪ್ರಕಾಶನ ಸ್ಥಳ ಹುಬ್ಬಳ್ಳಿ.

೫೫. **ಮೊಗವೀರ ಸಾಂವತ್ಸರಿಕ** (ವಾರ್ಷಿಕ ಸಂಚಿಕೆ):— ಮುಂಬಯಿ ಮೊಗವೀರ ಯುವಕ ಸಂಘದಿಂದ ಪ್ರಕಟಿತವಾಗಿದೆ. ಕ್ರೌ.. ೪೮ ಪುಟಗಳು. ಬೆಲೆ ೦–೪–೦.

೫೬. **ತೆಲುಗು ಚಾಟುಪದ್ಯಗಳು** (ಸುಭಾಷಿತ ಪರಿಚಯ). ಬರೆದವರು:— ಶ್ರೀ. ಕೆ. ವೆಂಕಟರಾಮಪ್ಪ ಎಂ. ಏ. ಅವರು. ಮೈಸೂರು ವಿ. ವಿ. ನಿಲಯದ ಪ್ರಚಾರ ಪುಸ್ತಕಮಾಲೆಯ ೪೩ ನೆಯ ಪ್ರಕಟನೆ. ಫೂ. ಕ್ಯಾ. ಅ. ೬೦ ಪುಟ. ಬೆಲೆ ೦–೩–೦.

೫೭. **ವಿಮಾನಾಣಿಜ್ಯ** (ಮಾಸಪತ್ರಿಕೆಯ ನವರಾತ್ರಿ ಸಂಚಿಕೆ):— ಸಂಪಾದಕರು ಶ್ರೀ. ಜೇ. ದೊಡ್ಡವೀರಪ್ಪನವರು ಬೆಂಗಳೂರು. ಪ್ರಕಾಶಕರು ಮ್ಯಾನೇಜಿಂಗ್ ಎಡಿಟರ್ ವಿಮಾನಾಣಿಜ್ಯ ನಗರ್ತರಪೇಟೆ, ಬೆಂಗಳೂರುನಗರ. ಕ್ರೌ. ಅ. ೬೪ ಪುಟಗಳು.

(೬೪ ನೆಯ ಪುಟದಿಂದ ಮುಂದೆಸಾಗಿದ್ದು)

ಗೂಡಿಸುವ ಕೈಜಳಕ ಇವುಗಳನ್ನು ಕಾಣಬಹುದು. ಇದರಲ್ಲಿ ಬಂದ ಕತೆಗಳಲ್ಲಿ ಹೆಚ್ಚಾದುವು ಪಾತ್ರಪ್ರಧಾನವಾದ ಕತೆಗಳೇ ಎಂದು ಹೇಳಬಹುದು. ಇದರಲ್ಲಿಯ ಪಾತ್ರಗಳು ಜೀವಂತವಾಗಿವೆ; ಸತ್ಯಸೃಷ್ಟಿಯಲ್ಲಿ ನಾವು ಅಲ್ಲಿ–ಇಲ್ಲಿ ನಿತ್ಯ ಜೀವನದಲ್ಲಿ ನೋಡುತ್ತೇವೆ. ಕಾಡು ಮೇಸ್ತ್ರಿ– ಶೈಲೆಯರ ಪಾತ್ರಗಳು ಕಣ್ಣಿಗೆ ಕಟ್ಟಿದಂತಾಗುತ್ತವೆ. ಕತೆಗಾರ್ತಿಯರು ಪರಿಣಾಮದ ದೃಷ್ಟಿಯಿಂದ—ಕೆಲವು ಕತೆಗಾರರು— ಹರುತ್ತಿರುವಂತೆ, ಅದ್ಭುತ ಟ್ರಾನ್ಸ್‌ಫರ್ ಸೀನರಿಗಳನ್ನು ತಂದಿಲ್ಲ. ಕತೆಯು ಮೆಲ್ಲಗೆ ಮುಂದೆ ಸಾಗುವಾಗ, ಎಲ್ಲಿಯೋ ಏನೋ ಆಗಿಬಿಡುತ್ತದೆ. ಬೆಳೆಯುತ್ತಿರುವ ಭಾವ ಶಾಂತವಾಗಿ ಪರಿಯುತ್ತದೆ. 'ಮುನ್ನಾದಿನ' 'ಮರದ ಬೊಂಬೆ' 'ಒಂದು ಚಿತ್ರ' ಇವು ಕಥಾಪ್ರಪಂಚದಲ್ಲಿ ಮಿನುಗುವ ತಾರೆಗಳು. 'ಕಂಬನಿ'ಯನ್ನೋದಿದವರು 'ಚಿಗುರು' ಓದಿದಾಗ, ವಾಜಕರು ಕನ್ನಡ ಕತೆಗಳ ಆಸ್ಥಾನದಲ್ಲಿ ಗೌರಮ್ಮನವರಿಗೆ ಇದ್ದ ಸ್ಥಾನವನ್ನು ಕಲ್ಪಿಸಹತ್ತುವರು. ಇವರಿಗೆ ಮೇಲಣ ಸ್ಥಾನವಿಡೆಯೆಂಬುದನ್ನು ಎಲ್ಲರೂ ಒಪ್ಪಬೇಕಾಗುವುದು. ಇದರ ಅರಿವಾಗಲು ಮತ್ತೆ 'ಕಂಬನಿ'ಗಳು ಬರುವವು. ಕನ್ನಡದ ದುರ್ದೈವ! ಇಂತಹ ಕೈಯ ಕತೆಗಾರ್ತಿ ಆಗಲಿಹೋದರು. ಇನ್ನೂ ಎಷ್ಟು ಒಳ್ಳೆಯ ಕತೆಗಳನ್ನು ಓದಿ ಸಂತೃಪ್ತಿ ಹೊಂದುತ್ತಿದ್ದೆವೇನೋ!

ಶ್ರೀ. ಜೇಂದ್ರೆಯವರು ಮುನ್ನುಡಿಯಲ್ಲಿ ಹೇಳಿದಂತೆ "ಪೂಮಾಲೆಯಲ್ಲಿ ಚಿಗುರನ್ನು ಪೋಣಿಸುವ ರೂಢಿ ನಮ್ಮಲ್ಲಿ ಮೊದಲಿನಿಂದಲೂ ಇದೆ" ಎಂದು ಹೇಳಿದುದೇನೋ ನಿಜ, ಆದರೆ ಚಿಗುರಿನಿಂದಲೇ ಮಾಲೆಯನ್ನು ಪ್ರಾರಂಭಿಸುವ ಪರಿಣತ ನಮ್ಮಲ್ಲಿ ಮಾತ್ರ ಇಲ್ಲವೆಂದು ವಿನೋದಕ್ಕಾಗಿ ಹೇಳಬಹುದು. ಇದನ್ನೇ ನಾವೀಗ ಲಲಿತ ಸಾಹಿತ್ಯ ಮಾಲೆಯ ವೈಶಿಷ್ಟ್ಯವೆನ್ನೋಣ! ಲಲಿತ ಸಾಹಿತ್ಯ ಮಾಲೆ ಬಹುಕಾಲ ಬಾಳಲಿ!

—ವಸಂತ

ಮನೆಯಲ್ಲಿಯೆ ಹೊಲಿಗೆ ಕಲಿಯಿರಿ!

ಶ್ರೀ. ಹಳಪೇಟೆ ಚಿಂತಾಮಣಿರಾಯರು ಟಿ. ಸಿ. ಡಿ.

ನೆಹರೂ ಜಾಕೀಟು

★

ನೆಹರು ಅಂಗಿಯ ಮೇಲೆ ಕೋಟು ಹಾಕುವ ರೂಢಿ ಇಲ್ಲದ್ದರಿಂದ, ಕೋಟಿನ ಅ ಸು ಕೂ ಲ ತೆ ಯು ಳ್ಳ ಜಾಕೀಟನ್ನು ಹಾಕುವ ಪರಿಪಾಠ ಪ್ರಾರಂಭವಾಯಿತು. ಇದಕ್ಕೆ ಹೊರಗೆ ಎಡಬಲಗಳಿಗೆ ಎರಡು, ಹಾಗೂ ಎದೆಯ ಮೇಲೆ ಒಂದು ಹೀಗೆ ಮೂ ರು ಜೊಕ್ಕಣಗಳಿರುವುದುಂಟು. ಇದಕ್ಕೆ ಒಳಗೆ ಪೂರ್ಣ ಒಳವಸ್ತ್ರವನ್ನು ಹಾಕುವುದರಿಂದ ಒಳಕ್ಕೂ ಎಡಬಲ ಬದಿಗಳಿಗೆ ಎರಡು ಜೊಕ್ಕಣಗಳನ್ನು ಮಾಡುವರು. ಮುಂದೆ ಇಷ್ಟವಿದ್ದಂತೆ ಳ ಇಲ್ಲವೆ ಗುಂಡಿಗಳನ್ನು ಹಚ್ಚುವರು.

ಅಳತೆ:—೨೪ ಇಂಚು ಎದೆ. ೨೨ ಇಂ. ನಡು. ೧೧ ಇಂಚು ನಡು ಉದ್ದ. ೧೫ ಇಂಚು (ಹಿಂದಿನಿಂದ) ಪೂರ್ಣ ಉದ್ದ. ೮ ಗುಂಡಿ ಬೆನ್ನು.

ಚಿತ್ರಿಸುವುದು:— ಹಿಂಭಾಗ.

ಬ, ಅ, ಕ, ಕಾಟಕೋನ.

ಅ. ಡ=೧೪" ಎಂದರೆ ಎದೆಯ ೧/೪+೨"

ಅ. ದ=೫" ಎಂದರೆ ಎದೆಯ ೪-೪"

ಅ. ನ=೧೧ ನಡುಉದ್ದ.

ಅ. ಕ=೧೫ ಪೂರ್ಣ ಉದ್ದ.

ಡ, ವನ್ನು ಈ ವರೆಗೆ, ದ, ನ, ಕ, ಗಳನ್ನು

ಪ, ಏ. ಣ ಗಳ ವರೆಗೆ ಬೆಳೆಯಿಸಿರಿ.

ಅ. ಫ=೨" ಎಂದರೆ ಎದೆಯ ೧/೪.

ಫ, ಇ=೪". ಅ. ಇ. ಕೂಡಿಸಿರಿ.

ಇ, ದಿಂದ ಡ, ಈ ರೇಷೆಯ ಮೇಲೆ,

ಇ, ಈ=ಳ್ಳಿ ಇಂಚು ಎಂದರೆ ಎದೆಯ ೧/೪+೪"

ಇ. ಈ. ಕೂಡಿಸಿರಿ. ಈ, ಯನ್ನು ಸರಳ ಕೆಳಕ್ಕೆಳೆಯಿರಿ.

ದ, ಲ=೭" ಎಂದರೆ ಎದೆಯ ೧/೪+೧".

ಲ, ವನ್ನು ಸರಳವಾಗಿ ಕೆಳಕ್ಕೆಳೆಯಿರಿ.

ರ, ೧=೪" ಲ. ೧. ವ. ಕೂಡಿಸಿರಿ.

ಈ, ಲ. ವನ್ನು ಚಿತ್ರದಂತೆ ಬಾಗು ಕೂಡಿಸಿರಿ.



ಮುಂಭಾಗ

ಲ. ಪ=೭" ಎಂದರೆ ಎದೆಯ ೧/೪+೧"

ಪ, ಶ=೫" ಎಂದರೆ ಎದೆಯ ೧/೪-೧"

ತ, ಜ=೧"

ಮು. ಇದು ತ. ಪ. ಗಳ ಮಧ್ಯ.

ಮು. ವನ್ನು ಸರಳ ಬ. ಕ್ಕೆ ಕೂಡಿಸಿರಿ.

ಬ, ಬೆನ್ನಿನ ಈ ಕ್ಕೆ ಕೂಡಿಸಿರಿ.

ಬ, ಗ. ಬೆನ್ನಿನ ಇ. ಈ. ಗಿಂತ ೧/೪" ಕಡಿಮೆ.

ಬ. ಗ. ಗಳನ್ನು ಚಿತ್ರದಂತೆ ಕೂಡಿಸಿರಿ.

ಗ, ಜ, ಸ, ಡ, ಳ ಕೂಡಿಸಿರಿ.

ಗ, ಜ, ಲ. ಗಳನ್ನು ಚಿತ್ರದಂತೆ ಬಾಗು ಕೂಡಿಸಿರಿ.

ಪ, ಶ.=೧/೪"

ತ. ಣ ೧. ಕೆಳಕ್ಕೆ.

ಣ, ಚ.=೧/೪"

ಶ. ಚ. ಗಳನ್ನು ಕೂಡಿಸಿರಿ.

ರ. ಬ. ವನ್ನು ಚಿತ್ರದಲ್ಲಿ ತೋರಿಸಿದಂತೆ ಕೊರಳಿನ ಬಾಗು ಕೂಡಿಸಿರಿ.

ಕೆಳಗಿನ ಜೆ. ಣ. ವ. ಗಳನ್ನು ಚಿತ್ರದಂತೆ ಕೂಡಿಸಿರಿ.

ರ, ೨=೪"

ಲ, ೨. ವ. ಕೂಡಿಸಿರಿ.

ಬೊಕ್ಕಣ (ಮೇಲಿನದು.)

ಸ, ನಿ=೧/೪"

ತ, ನಿ. ಕೂಡಿಸಿರಿ.

ತ, ರಿ=೧/೪"

ರಿ, ಸ. ೩" ಆಂದರೆ ಎದೆಯ ೧/೪

ರಿ, ಸ. ಗಳ ಕೆಳಕ್ಕೆ ೧/೪ ಇಂಚಿಗೆ ಜೊಕ್ಕಣದ ಗೆರೆ.

ಕೆಳಗಿನವು

ವಿ. ಹ. ೧.

೨. ಹ. ಕೂಡಿಸಿರಿ.

೨. ಳ=೧೧/೪"

ಳ. ವಿ=ಳ" ಎಂದರೆ ಎದೆಯ ೧/೪.

ಳ. ವಿ. ಗಳ ಕೆಳಕ್ಕೆ ೧/೪ ಇಂಚಿಗೆ ಜೊಕ್ಕಣದ ಗೆರೆ.

ಬೇಕಾಗುವ ಬಟ್ಟೆ

೩೦ ಇಂಚು ಅಗಲವುಳ್ಳ ಬಟ್ಟೆ ಮೇಲಿನ ಅಳತೆಯವನಿಗೆ ೪ ವಾರ ಸಾಕು. ಒಳವಸ್ತ್ರಕ್ಕೆ ಅಷ್ಟೇ ಅಗಲವುಳ್ಳ ೧/೪ ವಾರ ಬಟ್ಟೆ ಬೇಕು.

ನಗೆಗೆ ನೇವಿದ್ಯ

ಮಾತಿಗೆ ಮಾತು

ಅತ :—(ಊಟಕ್ಕೆ ಕುಳಿತಾಗ) ಏನು ಪಲ್ಯಾ ಮಾಡೀದಿಯಮ್ಮ! ಪ್ರದರ್ಶನಕ್ಕೆ ಕಳಿಸಬೇಕು ನೋಡು ಇದನ್ನ! ಒಂದಕರೆ ಅಡಿಗೀ ಚೆನ್ನಾಗಿ ಮಾಡಲಿಕ್ಕೆ ಬರತಮದೇನು?

ಆಕೆ :— ಹೌದು, ನನಗ ಒಂದನ್ನೂ ಚೆನ್ನಾಗಿ ಮಾಡಲಿಕ್ಕೆ ಬರೂದಿಲ್ಲ. ನನ್ನನ್ನ ಅಡಿಗೀಯವಾಕೀ ಅಂತ ತಿಳಿದು ನೀವು ಮದಿವೀ ಮಾಡಿಕೊಂಡಿರೇನು?

ಪಾಪ! 'ಅತ' ಆಗ ಹಲ್ಲಲ್ಲಿ ನಾಲಗೆ ಸೇರಿಸಿ ಸುಮ್ಮನಾದ.

ಆಕೆ :— (ಮಧ್ಯರಾತ್ರಿಯಲ್ಲಿ) ಏನು! ಎಲ್ರೀ, ಲಗೂನೇ ಏಳ್ರಿ! ಮನಿಯೊಳಗ ಕಳ್ಳರು ಬಂದ್ಹಾಂಗ ಕಾಣಿಸತಮದ; ಎದ್ದು ಹೋಗಿ ನೋಡಿಬರ್ರಿ!

ಅತ :— ನೀನೇ ಹೋಗಿ ನೋಡು! ನೀನು ನನ್ನ ಪೋಲೀಸಾಂತ ತಿಳಿದು ಮದಿವೀ ಮಾಡಿಕೊಂಡಿದೀ ಏನು?

* * *

ನನಗೇನೂ ಅನಿಸೂದಿಲ್ಲ!

ಮೋಪನಾಬಾಯಿ :— ನನ್ನ ಮೊದಲನೆಯ ಗಂಡ ನಿಮ್ಮ ಹಾಂಗ ತಿಳಿಗೇಡಿ ಇರಲಿಲ್ಲ; ತುಂಬ ಬುದ್ಧಿಶಾಲಿ ಇದ್ದ.

ಮುದ್ದೂರಾಯ :— ನನಗೇನೂ ಈ ನಿನ್ನ ಮಾತಿನಲ್ಲಿ ನಂಬಿಕೆ ಅನಿಸೂದಿಲ್ಲ!

ಮೋಪನಾಬಾಯಿ :— ಯಾಕ? ಅದ್ಯಾಕ ನಂಬಿಕೆ ಅನಿಸೂದಿಲ್ಲ!

ಮುದ್ದೂರಾಯ:— ಅವನೂ ನಿನ್ನನ್ನೇ ಮದಿವೀ ಮಾಡಿಕೊಂಡಿದ್ದನಲ್ಲನೆ? ಅಂದ ಮ್ಯಾಲೆ.....

* * *

ಗುಂಡಿಯು ಲಗ್ನ

"ಯಾಕೋ ರಂಗಾ, ನಮ್ಮ ಗುಂಡೀ ಲಗ್ನಕ್ಕೆ ಬರಲೇ ಇಲ್ಲ ನೀನು?"

"ಅದೇ ಮುಹೂರ್ತಕ್ಕs ನನ್ನ ಲಗ್ನನೂ ಇತ್ತು."

"ಆಂ! ಇದೇನು ಮಾತೋ? ಹಿಂದ-ಕ್ಕೊಮ್ಮೆ ನಾ ಕೇಳಿದಾಗ 'ಲಗ್ನ ಆಗೇದ' ಅಂತ ಹೇಳಿದ್ದಿಲ್ಲs ನೀನು? ಛೇ! ಛೇ! ನಿನ್ನ ಲಗ್ನ ಆಗಿಲ್ಲ ಅಂಬೂದು ನನಗ ಗೊತ್ತ ಇದ್ದಿದ್ದರ, ನಮ್ಮ ಗುಂಡಿನ್ನs ನಿನಗ ಕೊಡ-ಬಹುದಾಗಿತ್ತು!

"ಅದಕs ನ್ರೀ ನಿಮಗ ಆ ಮಾತು ಗೊತ್ತಾಗದ ಹಾಂಗ ಮಾಡಿದ್ದು ನಾನು!"

* * *

ಹೆಂಡಂದಿರ ನಂಬುಗೆ

ಖಂಡೇರಾಯರು :— ನಾನು ಹೆಂಡತಿಯೆದುರು ಒಂದನ್ನೂ ಮುಚ್ಚಿ ಇಡದ ಎಲ್ಲಾ ಇದ್ದ ಮಾತನ್ನೂ ಹೇಳುತ್ತೇನೆ. ಆದರೂ ಆಕೆ ನನ್ನ ಒಂದು ಮಾತನ್ನೂ ನಂಬುವುದಿಲ್ಲ!

ಬಂಡೇರಾಯರು :— ಹಿಂಗೇನು? ನಮ್ಮಲ್ಲಿ ಎಲ್ಲವೂ ತಿರುವು ಮುರುವು. ನಾನು ಯಾವಾಗಲೂ ನನ್ನ ಹೆಂಡತಿಯ ಮುಂದೆ, ಎಂದೂ—ಎಲ್ಲಿಯೂ—ನಡೆಯದ ಪಂಗತಿಗಳನ್ನು ಹೇಳುತ್ತಿರುತ್ತೇನೆ. ಆದರೂ ಅವಳು ನನ್ನಷ್ಟು ಇನ್ನಾರನ್ನೂ ನಂಬುವುದಿಲ್ಲ!

* * *

ಅಳುವು, ಹಾಡು!

"ಅಲ್ಲೋ, ಮಗು ಒಂದೇ ಸವನೇ ಅಳಲಿಕ್ಕೆ ಹತ್ತೇದ. ಒಳಗಿಂದ ನಿನ್ನ ಹೆಂಡ-ತಿನ್ನ ಕರೆದು ಕೂಸಿನ್ನ ಸಮಾಧಾನಪಡಿಸಲಿಕ್ಕೆ ಹೇಳಬಾರದೇ?

"ಸುಮ್ಮನಿರೋ ಮಹಾರಾಯಾ! ಈಗ ಅತಿನ್ನ ಕರೆದರ, ಕೂಸಿನ್ನ ಸಮಾಧಾನಪಡಿಸ-ಲಿಕ್ಕಂತ ಜೋಗುಳ ಹಾಡು ಪ್ರಾರಂಭ ಬಿಡತಾಳ!"

* * *

ಸರಿಯಾದ ಮಾರ್ಗ

ವ್ಯಾಪಾರದಲ್ಲಿಯ ಇಬ್ಬರು ಪ್ರತಿಸ್ಪರ್ಧಿಗಳು, ಅದೃಷ್ಟವಶದಿಂದ ಒಂದೇ ಬ್ಯಾಂಕಿನಲ್ಲಿ ಡೈರೆಕ್ಟರ್ ಆಗಿ ಆಯ್ಕೆ ಹೊಂದಿದ್ದರು. ಮಿಟಿಂಗ್ ಮುಗಿಸಿ ಡೈರೆಕ್ಟರರೆಲ್ಲ ಹೊರಟು ಹೊದೆಯುತ್ತ ಕುಳಿತಾಗ ಒಬ್ಬ ಹೇಳಿದ :

"ವ್ಯಾಪಾರದಲ್ಲಿ ಲಾಭಗಳಿಸಲಿಕ್ಕೆ ನೂರೆಂಟು ಮಾರ್ಗಗಳಿವೆ!"

ಕೂಡಲೆ ಇನ್ನೊಬ್ಬ ಹೇಳಿದ :

"ಅದೇನೋ ಇರಬಹುದು; ಆದರೆ ಸರಿಯಾದ ಮಾರ್ಗವಿರುವುದು ಒಂದೇ ಒಂದು!"

"ಅದಾವುದು?" ಮೊದಲಿನವನು ಕೇಳಿದ.

"ಕೇಳಿದಿರೇನು? ಅದೊಂದು ಮಾರ್ಗ ಮಾತ್ರ ಇವರಿಗೆ ಗೊತ್ತಿಲ್ಲವೆಂಬುದು ಪೊಲೀಸಿನಿಂದಲೂ ನನಗೆ ಗೊತ್ತು!"

ಈ ಮಾತನ್ನು ಕೇಳಿ ಎಲ್ಲರೂ ನಕ್ಕರೇಕೆ ಎಂಬುದು, ಮೊದಲನೆಯವನಿಗೆ ತಿಳಿಯಲೇ ಇಲ್ಲ.



ಸೋಲ್ ಎಜಂಟರು.
ವಾಗ್ವಿಲಾಸ ಬುಕ್‌ಡಿಪೊ, ಹುಬ್ಬಳ್ಳಿ



ಪಕ್ಷಾತೀತರ ಪರಿಷತ್ತು

ಡಿಸೆಂಬರ್ ತಿಂಗಳ ೧೨ ಕ್ಕೆ, ಬ್ಯಾ. ಜಯಕರರ ಅಧ್ಯಕ್ಷತೆಯಲ್ಲಿ ಪಕ್ಷಾತೀತರ ಪರಿಷತ್ತು ಸೇರಿತ್ತು. ದೇಶದ ಪ್ರಮುಖ ರಾಜಕೀಯ ಪಕ್ಷವು ಕಾರಾಗೃಹದಲ್ಲಿ ಕೊಳೆಯುತ್ತಲಿದೆ; ಉಳಿದ ನೂರಾರು ರಾಷ್ಟ್ರೀಯಪಕ್ಷಗಳು ಎಂದಿನಂತೆ 'ದೇಶಕ್ಕಿಂತಲೂ ಜಾತಿ ಹೆಚ್ಚಿನದು, ದೇಶದ ಸ್ವಾತಂತ್ರ್ಯಕ್ಕಿಂತಲೂ ಸ್ವಾರ್ಥದ ಸ್ವಯಂಪ್ರತಿಷ್ಠೆ ಹೆಚ್ಚಿನದು' ಎಂದು ಸಿದ್ಧಪಡಿಸಲು ತಂತಮ್ಮೊಳಗೆ ಸೇಲಾಟವನ್ನು ನಡೆಸಿವೆ; ಕೆಲವು ಸ್ವಾರ್ಥಸೇವೆಯ ಅಧಿದೇವತೆಗಳಾದ ವ್ಯಕ್ತಿಗಳು ಅಧಿಕಾರಾಸನದಲ್ಲಿ ಕುಳಿತುಕೊಂಡು, ಅದೇ ದೇಶದ ಹಿತ ಎಂದು ಸಾಧಿಸುತ್ತಿವೆ. ಇಂತಹ ಬಿಸಿಲ್ಗುದುರೆಯ ವಾತಾವರಣದಲ್ಲಿ ಸರ್ ತೇಜಬಹಾದ್ದೂರ್ ಸಪ್ರು ಮತ್ತು ಬ್ಯಾ. ಜಯಕರರಂತಹರ ಧೈರ್ಯ-ನಿಃಸ್ವಾರ್ಥ-ಬುದ್ಧಿಮತ್ತೆಗಳನ್ನೆ ನಮ್ಮ ರಾಜಕಾರಣವು ಅವಲಂಬಿಸಿದ್ದರೆ ಆಶ್ಚರ್ಯವಲ್ಲ. ಅಷ್ಟೊಂದು ಮಹತ್ತ್ವವಿದ್ದಿತು ಈ ಪರಿಷತ್ತಿಗೆ. ಈ ಅಧಿವೇಶನಕ್ಕೆ ಬೇರೆ ಪ್ರಮುಖರನ್ನೂ ಸಂಗಡಪುಂಡ (= ಜಾತೀಯ ಪಕ್ಷಗಳ ನಾಯಕ) ರನ್ನೂ ಕರೆದಿದ್ದುದರಿಂದ, ಇದರ ಮಹತ್ತ್ವ ಇನ್ನಿಷ್ಟು ಬೆಳೆದಿದೆ. ಈ ಅಧಿವೇಶನದಲ್ಲಿ ಯಾವ ನಿರ್ಣಯ ಸ್ವೀಕೃತವಾಯಿತೆಂಬುದು ಇನ್ನೂ ಪ್ರಕಟವಾಗಿಲ್ಲ. ಆದರೆ ಆ ನಿರ್ಣಯವನ್ನು ಪಕ್ಷಪ್ರಮುಖರು ತಮ್ಮ ಅನುಯಾಯಿಗಳ ಒಪ್ಪಿಗೆಗಾಗಿ ಕಳುಹಿಸಿದ್ದಾರಂತೆ. ಒಂದು ವೇಳೆ ಇವರೆಲ್ಲರೂ ಒಪ್ಪಿದರೆ (ಒಪ್ಪುವುದೆ ಹೆಚ್ಚು ಸಂಭವನೀಯವಿದೆ), ಈ ಪಕ್ಷಾತೀತ ಪರಿಷತ್ತಿನ ನಿರ್ಣಯವು, ಕಾಂಗ್ರೆಸನ್ನುಳಿದು (ರಾಜಾಜಿಯವರಿಗೆ ಕಾಂಗ್ರೆಸನ್ನೊಪ್ಪಿಸುವ ಹೊಣೆ ಇರಬಹುದಾಗಿದೆ) ಎಲ್ಲ ಪಕ್ಷಗಳ ಏಕಮತದ ನಿರ್ಣಯವೆಂದು ಧೈರ್ಯವಾಗಿ ಹೇಳಬಹುದು.

ನಿರ್ಣಯದ ನಿಜಸ್ವರೂಪ

ನಿರ್ಣಯವು ಪ್ರಕಟವಾಗದಿದ್ದರೂ ಅದರ ನಿಜಸ್ವರೂಪದ ಕಲ್ಪನೆಯಾಗುವಂತಿದೆ; ಯಾಕೆಂದರೆ, ಪರಿಷತ್ತಿನ ಸ್ಥಾಯಿ ಸಮಿತಿಯು, ದೇಶದ ಪರಿಸ್ಥಿತಿಯ ಬಗ್ಗೆ ಒಂದು ಅಧಿಕೃತ ಪ್ರಕಟನೆಯನ್ನು ಕೊಟ್ಟಿದೆ; ಆ ಪ್ರಕಟನೆಯ ಧ್ವನಿಯಿಂದ ನಿರ್ಣಯದ ಸ್ವರೂಪ ತಿಳಿಯಬಹುದಾಗಿದೆ. ಸ್ಥಾಯಿ ಸಮಿತಿಯ ಪ್ರಕಟನೆಯು ಮುಖ್ಯವಾಗಿ ನಾಲ್ಕು ವಾಕ್ಯಗಳನ್ನು ಹೇಳಿದೆ:—

೧. ಹಿಂದುಸ್ತಾನದಲ್ಲಿ ರಾಜಕೀಯ ಮತ್ತು ಆಡಳಿತದ ಸರ್ವಾಧಿಕಾರ ಬ್ರಿಟಿಶರ ಕೈಯಲ್ಲಿಯೆ ಇದೆ. ಸದ್ಯಕ್ಕಿಂತೂ ಆರ್ಡಿನೆನ್ಸ್‌ಗಳ ಆಳಿಕೆಯಿಂದ ರಾಜಸರಾಜ್ಯ (Reign of law) ವ್ಯಕ್ತಿಯ ಸರ್ವಾಧಿಕಾರಿತ್ವ ನೆಲೆಗೊಂಡಿದೆ. ಅಧಿಕಾರದ ಸೂತ್ರಗಳು ಪ್ರತಿಯೊಂದು ಖಾತೆಯಲ್ಲಿ ಬ್ರಿಟಿಶ್ ಅಧಿಕಾರಿಗಳ ಕೈಯಲ್ಲಿಯೆ ಕೇಂದ್ರೀಕೃತವಾಗಿದೆ.

೨. ಆರ್ಡಿನೆನ್ಸ್ ರಾಜ್ಯದಲ್ಲಿ ಅನ್ಯಾಯಕ್ಕೆ ಆಸ್ಪದ ಹೊರತೆಪೆಯಲ್ಲದೆ ಪ್ರತೀಕಾರವೂ ಇಲ್ಲದಂತಾಗಿದೆ. ಹಿಂಸೆಯ ಕೃತ್ಯಗಳನ್ನು ವೃಥಮನಸ್ಸಿನಿಂದ ದಂಡಿಸಲಿ; ಆದರೆ ಜನರನ್ನು ಹೆದರಿಸುವುದಕ್ಕಾಗಿಯೆ ಕಠೋರವಾಗುವುದು ಯುಕ್ತವಲ್ಲ. ಪುಂಡಗಂಡಾಯದ ವಿಷಯದಲ್ಲಂತೂ ಕೇವಲ ಹಿಂದುಗಳ ಮೇಲೆಯೆ ಅದನ್ನು ಹೇರಿದ್ದು ಅನ್ಯಾಯವಲ್ಲದೆ ಶಾಸನವಿರುದ್ಧ (illegal) ವಾಗಿದೆ.

೩. ವೈಸರಾಯರ ಕೌನ್ಸಿಲನ್ನು ವಿಸ್ತರಿಸಿದ್ದು ಪುರುಳಿಲ್ಲದ ಸುಧಾರಣೆ ಎಂಬುದಕ್ಕೆ ಸಾಕಷ್ಟು ಆಧಾರಗಳಿವೆ. ಸ್ವತಃ ಕೌನ್ಸಿಲರರೆ 'ತಮಗೆ ಕೇವಲ ಹೇಳುವ (advisor) ಅಧಿಕಾರವಿದೆ, ಆಳುವ (initiative) ಅಧಿಕಾರವಿಲ್ಲ' ಎಂದು ಬಹಿರಂಗವಾಗಿ ಹೇಳುತ್ತಾರೆ. ಈ ಕೌನ್ಸಿಲ್‌ನ ನಿಸ್ತರಣೆಯಲ್ಲಿ ಕಂಡುಬರುವ ನಿಸಂಗತತನ ರಾಜಕೀಯ ಘೋರಣೆಯಲ್ಲೂ ಕಂಡುಬರುವುದು. 'ರಾಜಕೀಯ ಪಕ್ಷಗಳಲ್ಲಿ ಒಮ್ಮತವಾದರೆ ಆ ಬೇಡಿಕೆಯನ್ನು ಮಾನ್ಯ ಮಾಡುವೆವು' ಎಂದು ನುಡಿ; ಒಮ್ಮತಕ್ಕಾಗಿ ಚರ್ಚೆ ಮಾಡಬೇಕೆಂದರೆ ಡಾ. ಮುಕರ್ಜಿ ಮತ್ತು ರಾಜಾಜಿಯಂತಹರಿಗೆ ಕೂಡ ಮಹಾತ್ಮರನ್ನು ಕಾಣಲು ಅಪ್ಪಣೆ ಕೊಡದಂತಹ ನಡೆ!

೪. ಸದ್ಯದ ಸರಕಾರದ ನೀತಿಯಲ್ಲಿ ಮುತ್ಸದ್ದಿತನವೂ ಇಲ್ಲ, ಯೋಗ್ಯತೆಯೂ ಇಲ್ಲ. ಇಂದಿನ ನಿರಾಸೆ ಮತ್ತು ನಿಷ್ಕ್ರಿಯ ವಾತಾವರಣವನ್ನು ಸರಿಪಡಿಸಲೂ, ಬ್ರಿಟಿಶರಲ್ಲಿ ನಮ್ಮ ವಿಶ್ವಾಸವನ್ನು

ಸುದರ್ಶನ

ಸರಸ ಸಾಮಾಜಿಕ ಕಾದಂಬರಿಯು

ಬರೆದವರು—'ಆನಂದಕಂದ'

ಹತ್ತು ಹತ್ತು ಸಲ, ಇಪ್ಪತ್ತು ಇಪ್ಪತ್ತು ಸಲ ಓದಿಯೂ ಮತ್ತೆ ಮತ್ತೆ ಓದಬೇಕೆನಿಸಿದ ಅನುಭವವನ್ನು, ಹಲವು ಜನ ವಾಚಕರು ಈ ಕಾದಂಬರಿಯ ಬಗ್ಗೆ ತಳೆದಿದ್ದಾರೆ. ಪಾತ್ರಗಳ ಸೃಷ್ಟಿ, ಅವುಗಳ ಬೆಳೆವಣಿಗೆ, ಕಥಾರಚನೆ, ಭಾಷಾಶೈಲಿ ಇವುಗಳ ಹೊಸತನದ ಮೂಲಕ, ಕನ್ನಡ ಕಾದಂಬರೀ ಪ್ರಪಂಚದಲ್ಲಿಯೆ ಇದೊಂದು ವಿಶಿಷ್ಟ ಸ್ಥಾನವನ್ನು ಪಡೆದು ನಿಂತಿದೆ. ಬೆಲೆ ೦-೧೪-೦.

ಬೇಕಾದವರು 'ಜಯಂತಿ' ಕಾರ್ಯಾಲಯಕ್ಕೆ ಬರೆದು ತರಿಸಿಕೊಳ್ಳಬೇಕು.

ಹುಟ್ಟಿಸಲೂ ಒಂದೇ ಉಪಾಯವಿದೆ. ಅದೆಂದರೆ ಯುದ್ಧ ಸಮಯದ ನಂತರ, ಶಕ್ಯವಿದ್ದಷ್ಟು ಅಧಿಕಾರವನ್ನು ಪೂರ್ತಿಯಾಗಿ ಭಾರತೀಯರಿಗೆ ಒಪ್ಪಿಸುವುದು.

ವೈಸರಾಯರ ಒಪ್ಪಿಗೆ!

ಪಕ್ಷಾತೀತ ಪರಿಷತ್ತಿನ ಅಭಿಪ್ರಾಯವನ್ನು ಮುಂದೆ ಒಂದೇ ವಾರದಲ್ಲಿ ವೈಸರಾಯರೇ—ತಿಳಿದೊ ತಿಳಿಯದೆಯೊ—ಒಪ್ಪಿದರೆಂದು ಹೇಳಬಹುದು. ಕಲಕತ್ತೆಯಲ್ಲಿ ಅಸೊಸಿಯೇಟೆಡ್ ಚೆಂಬರ್ ಆಫ್ ಕಾಮರ್ಸ್‌ನಲ್ಲಿ, ಡಿಸೆಂಬರ್ ೧೭ ಕ್ಕೆ ಭಾಷಣ ಮಾಡುವಾಗ ಲಾರ್ಡ್ ಲಿನ್‌ಲಿಥ್‌ಗೋರವರು ಹೀಗೆ ಹೇಳಿದರು :— 'ಬ್ರಿಟಿಶರು ಅಧಿಕಾರವನ್ನು ಬಿಟ್ಟುಕೊಡಬೇಕೆಂಬುವಕ್ಕಾಗಿಯೆ ಇಂದಿನ ಪರಿಸ್ಥಿತಿ ಪ್ರಾಪ್ತವಾಯಿತು. ಆ ಅಧಿಕಾರವನ್ನು ಯಾರು ವಹಿಸಬೇಕೆಂಬುದಕ್ಕೆ ಭಾರತೀಯ ಪಕ್ಷಗಳಲ್ಲಿ ಒಮ್ಮತವಾಗಲಿಲ್ಲ. ಬರುವ ಹತ್ತುತಿಂಗಳಲ್ಲಿ ಆ ಒಮ್ಮತ ಸಾಧಿಸಿದರೆ ನನಗೆ ಅತ್ಯಂತ ಸಮಾಧಾನವಾಗುವುದು.'! ಭಾರತೀಯರ ಒಮ್ಮತಕ್ಕಾಗಿ ಇಷ್ಟೊಂದು ಕಳಕಳಿಯಿದ್ದ ಲಿನ್‌ಲಿಥ್‌ಗೊ ಸಾಹೇಬರೇ ಮಹಾತ್ಮರನ್ನು ಕಾಣಲು ಯಾರಿಗೂ ಅಪ್ಪಣೆ ಕೊಡಲಿಲ್ಲ, ಕೊಡುವಂತಿಲ್ಲ! ಹೀಗಿರುವಾಗ, ಈ ವಿಸಂಗತತನವು ಬುದ್ಧಿಯ ಕೊರತೆ ಎನಿಸುವುದೊ, ಬುದ್ಧಿಪೂರ್ವಕ ಕುಚೇಷ್ಟೆಎನಿಸುವುದೊ? 'ಎಲ್ಲ ವ್ಯಾವಹಾರಿಕ ದೃಷ್ಟಿಗಳಿಂದ ಹಿಂದುಸ್ತಾನವು ಒಂದು ರಾಷ್ಟ್ರವಾಗಿದೆ' ಎಂಬ ಸಾಹೇಬರ ಉದಾತ್ತವಿಚಾರವು ಬ್ರಿಟಿಶ ಘೋರಣೆಯಾಗಿಜೆಯೊ, ಮುಸ್ಲಿಂ ಲೀಗಕ್ಕೆ ಉತ್ತೇಜನವಾಗಿದೆಯೊ? ಉದಾತ್ತ ಘೋರಣೆಯು ಪರದೇಶ ಪ್ರಚಾರಕ್ಕಾಗಿ ಪ್ರವಹಿಸುವ ಶಬ್ದಾಡಂಬರವಾಗಿದೆ; ಅದಕ್ಕೆ ವಿರುದ್ಧವಾದ ಆಚಾರವು, ಸುದ್ದಿನಿಯಂತ್ರಣದಿಂದ ಹಿಂದುಸ್ತಾನಕ್ಕಾಗಿಯೆ ಕಾದಿಟ್ಟ ದಬ್ಬಾಳಿಕೆಯಾಗಿದೆ. ಈ ಪರಿಸ್ಥಿತಿಯನ್ನೇ ಪಕ್ಷಾತೀತ ಪರಿಷತ್ತಿನ ಪ್ರಕಟನೆಯಿಂದ ಪ್ರಾರಂಭವಲ್ಲಿಯೆ ತೀವ್ರವಾಗಿ ಖಂಡಿಸಿದೆ, 'ಸಂದೇಹವುಳ್ಳ ಅಮೇರಿಕೆಯು ಜನರಿಗಾಗಿ, ಸಹಾನುಭೂತಿಯುಳ್ಳ ಚೀನೀಯ ಜನರಿಗಾಗಿ, ಹಿಂದುಸ್ತಾನದ ಬಗ್ಗೆ ಅಪಪ್ರಚಾರವನ್ನು ಮಾಡುವ ಚಾತುರ್ಯದಿಂದ ಬ್ರಿಟಿಶ ಮುತ್ಸದ್ದಿಗಳು ಭಾಷಣ ಮಾಡಿ, ಭಾರತೀಯರಲ್ಲಿ ಒಕ್ಕಟ್ಟಿಲ್ಲದುದೆ ಇಂದಿನ ಬಿಕ್ಕಟ್ಟಿನ ಕಾರಣವಾಗಿದೆ ಎಂದು ಸಾಧಿಸುತ್ತಲಿದ್ದಾರೆ,' ಎಂದು ಈ ಪ್ರಕಟನೆಯು ಅಭಿಪ್ರಾಯ ಪಡುತ್ತಿದೆ.

ಅಪಪ್ರಚಾರವೆ ಆಧಾರಸ್ತಂಭ

ನೆಲಿನ ಪಕ್ಷಾತೀತ ಮುಂದಾಳುಗಳ ಅಭಿಪ್ರಾಯವು ತೀರ ಸೌಮ್ಯವಾದುದೆಂದೇ ಹೇಳಬಹುದು. ಯಾಕೆಂದರೆ ಇಂದು ಹಿಂದುಸ್ತಾನವನ್ನು ಆಳುವುದರಲ್ಲಿ ಬ್ರಿಟಿಶರು ಎರಡೇ ಎರಡು ರಕ್ತಿಗಳನ್ನು ಉಪಯೋಗಿಸುತ್ತಿದ್ದಾರೆ: ಅವುಗಳಲ್ಲಿ ಅಪಪ್ರಚಾರ ಒಂದು (ಆರ್ಡಿನನ್ಸ್ ಇನ್ನೊಂದು). ಹಿಂದುಸ್ತಾನದ ನಿಜ ಪರಿಸ್ಥಿತಿಯನ್ನು ಹೊರಗೆ ಕಳುಹಿಸುವುದಿಲ್ಲ; ಹೊರ ಜಗತ್ತಿನಲ್ಲಿ ಹಿಂದುಸ್ತಾನಕ್ಕಿದ್ದ ಸಹಾನುಭೂತಿಯನ್ನು ಹಿಂದೀಯರಿಗೆ ತಿಳಿಯಗೊಡುವಂತಿಲ್ಲ. ಇಷ್ಟರಿಂದಲೇ ಹಿಂದುಸ್ತಾನದ ಸರಕಾರಕ್ಕೆ ತೃಪ್ತಿ ಇಲ್ಲ. ಹಿಂದುಸ್ತಾನದಲ್ಲಿ ಇಲ್ಲದ ಪರಿಸ್ಥಿತಿಯನ್ನು ನಿಜ ಪರಿಸ್ಥಿತಿಯೆಂದು ಹೊರ ಜಗತ್ತಿಗೆ ಹೇಳುವುದು; ಹೊರ ಜಗತ್ತಿನ ಹೊರತು ಇಲ್ಲದ ಕೇಳು ಅಭಿಪ್ರಾಯಕ್ಕೆ ಹಿಂದುಸ್ತಾನದಲ್ಲಿ ಪ್ರವೇಶವನ್ನು ಒಪಗಿಸಿಕೊಡುವುದು (ಆಗಸ್ಟ್‌ನ ಎ. ಆಯ್. ಸಿ. ಸಿ. ಸಭೆಯಲ್ಲಿ ವೇಶ್ಯೆಯರ ನೃತ್ಯ ನಡೆಯಿತೆಂಬ ಸುದ್ದಿ ಬ್ರಿಟಿಶ್ ಪತ್ರಿಕೆಯಲ್ಲಿ ಬರೆದು, ಆ ಸಂಜಿಕೆಗಳಿಗೆ ಹಿಂದುಸ್ತಾನದಲ್ಲಿ ಪ್ರವೇಶ ಪಡೆದ ಕಮ್ಯೂ—ಅಮೇರಿಕೆಯ ಕೆಲವು ಅಭಿಪ್ರಾಯಗಳು ನಿಯಂತ್ರಿತವಾದುದೂ ಈ ಮಾತಿಗೆ ಉದಾಹರಣೆ). ಹೀಗೆ ಅಪಪ್ರಚಾರದ ತಳಹದಿಯ ಮೇಲೆ ನಡೆವ ಆಡಳಿತವನ್ನು ಸಹಿಸಿಕೊಳ್ಳುವ ಸ್ವಭಾವದ ಈಗಿನ ವೈಸರಾಯರನ್ನು ಕಾರ್ಯನಿವೃತ್ತ ಮಾಡುವುದೇ ನಮಗೂ ಬ್ರಿಟಿಶರಿಗೂ ಹಿತ ಎಂದು ಬುದ್ಧಿವಂತರು ಅಭಿಪ್ರಾಯ ಪಟ್ಟರೂ, ಚರ್ಚಿಲ್ ಸಾಹೇಬರು ವೈಸರಾಯರಲ್ಲಿ ವಿಶ್ವಾಸವನ್ನು ವ್ಯಕ್ತಮಾಡಿದರು! ಇದರಿಂದ ದೇಶಕ್ಕೆ ಆದ ಅಪನೂನಕ್ಕಿಂತ ಅಪಪ್ರಚಾರ ನೀತಿಗೆ ಪೊರೆತ ಸನ್ಮಾನ ಸ್ಪಷ್ಟವಿದೆ. 'ಕ್ರಿಪ್ಸ್ ಯೋಜನೆಯನ್ನು ಯಾವ ಪಕ್ಷವನವರೂ ಸ್ವೀಕರಿಸಲಿಲ್ಲ' ಎಂಬುದರ ಬದಲಾಗಿ 'ಈ ಯೋಜನೆಗಾಗಿ ಒಮ್ಮತವಾಗಲಿಲ್ಲ' ಎಂಬ ವೈಸರಾಯರ ಧ್ವನಿ ಅಪಪ್ರಚಾರದ ಆಳಾಪವಲ್ಲದೆ ಮತ್ತೇನು? ಆರ್ಡಿನನ್ಸ್ ರಾಜ್ಯವು ಸರ್ವಾಧಿಕಾರದ ರಾಜ್ಯವೆಂಬುದಕ್ಕೆ ಈ ಅಪಪ್ರಚಾರದ ಮಯಸಭೆಯು ಮೂರ್ತಿಮಂತ ದೃಷ್ಟಾಂತವಾಗಿದೆ.

ಆರ್ಡಿನನ್ಸ್ ಮತ್ತು ಅನ್ಯಾಯ

'ಆರ್ಡಿನನ್ಸ್ ರಾಜ್ಯದಲ್ಲಿ ಅನ್ಯಾಯಕ್ಕೆ ಆಸ್ಪದ ಪೊರೆತಿದೆಯಲ್ಲದೆ ಪ್ರತೀಕಾರವೂ ಇಲ್ಲವಂತಾಗಿದೆ' ಎಂಬ ಸ್ಥಾಯಿ ಸಮಿತಿಯ ಸೂತ್ರ

ಸತ್ಯವಾಗಿದೆ. ಚಿಮೂರ ಪ್ರಕರಣವನ್ನೆ ನೋಡಬಹುದು. 'ಪೋಲೀಸ್ ಇಲ್ಲದೆ ನ್ಯಾಯಾಧಿಕಾರಿಗಳಿಂದ ಅತಿರೇಕದ ವರ್ತನೆಯಾದಲ್ಲಿ ಅದರ ವಿಚಾರಣೆಯನ್ನು ಮಾಡಲಾಗುವುದು' ಎಂದು ಕಾಯಿದೆ ಮೆಂಬರ್ ರಾವ ಸರ್ ಸುಲ್ತಾನ್ ಅಹಮ್ಮದರೂ 'ಪಂತೋಜಿ' ಅಣೆಯವರೂ ಅಭಿವಚನವನ್ನು ಕೊಟ್ಟರು. ಡಾಕ್ಟರ್ ಮುಂಜೆ ಮತ್ತು ಬೇರೆ ಕೆಲವರು ಚಿಮೂರದಲ್ಲಿ ಅತಿರೇಕದ ವರ್ತನೆಯಾಗಿದೆಯೆಂಬುದನ್ನು ಮಧ್ಯಪ್ರಾಂತ ಸರಕಾರದ ಮತ್ತು ಅಣೆಯವರ ನಿವರ್ಹನೆಕ್ಕೆ ತಂದುಕೊಟ್ಟರು. ಅದಕ್ಕೆ ಪೊರೆತ ಉತ್ತರವೇನು? 'ಮುಂಜೆಯವರು ಯಾವುದನ್ನೂ ಸಿದ್ಧಪಡಿಸಿಲ್ಲ, ಬರಿಯ ಅಪಾದನೆಗಳನ್ನು ಹೊರಿಸಿದ್ದಾರೆ, ಅದಕ್ಕೆ ನಿರಾಕರಣೆ ಶಕ್ಯವಿಲ್ಲ' ಎಂದು ಮ. ಪ್ರಾಂ. ಸರಕಾರದವರ ಉತ್ತರ! ಸಿದ್ಧಮಾಡುವ ಅಧಿಕಾರ ಮುಂಜೆಯವರದೊ ನ್ಯಾಯಕಚೇರಿಗದೊ? ಹೊರಿಸಿದ ಆಪಾದನೆಗಳನ್ನು ಸಿದ್ಧಮಾಡುವ ಹೊಣೆ ತಪ್ಪುದೆಂಬ ಮಾತು ಮುಂಜೆಯವರಿಗೆ ಗೊತ್ತಿಲ್ಲವೆ? ಸಿದ್ಧಮಾಡುವುದೆಲ್ಲಿ? ಪ್ರಕಟನೆಯಲ್ಲಿಯೆ? ಅರ್ಜಿಯಲ್ಲಿಯೆ? ನ್ಯಾಯ ಸಮಿತಿಯ ಇದಿರಿನಲ್ಲಿಯೆ? ಎಲ್ಲ ಕಡೆಗೆ ನಡೆದಿರುವ ಪುಂಡಗಂದಾಜಿನ ಅನ್ಯಾಯಕ್ಕೆ ಇನ್ನೊಂದು ಉದಾಹರಣೆ. ಸಾಮಾನ್ಯವಾಗಿ ಎಲ್ಲ ಕಡೆಯಲ್ಲೂ 'ಹಿಂದು'ಗಳ ಮೇಲೆಯೆ ಈ ದಂಡವನ್ನು ಹೇರಲಾಗಿದೆ. ಎಲ್ಲ ಹಿಂದುಗಳು ಕಾಂಗ್ರೆಸಿನ ಅನುಯಾಯಿಗಳೆಂದು ಈ ನ್ಯಾಯವೆ? ಪುಂಡತನವು ಕೇವಲ ಹಿಂದುಗಳ ವೈಶಿಷ್ಟ್ಯ ಎಂಬ ವಿಚಾರವೆ? 'The uprising which had no support from great sections of the Hindu community' (ಈ ಚಳವಳಕ್ಕೆ ಹಿಂದುಗಳಲ್ಲಿ ಬಹು ಭಾಗವು ಸಹಾಯಕೊಟ್ಟಿಲ್ಲ) ಎಂದು ಸೈಸರಾಯರೆ ತಮ್ಮ ಭಾಷಣ (೧೮-೧೨-೪೨ ಕ್ಕೆ) ದಲ್ಲಿ ಅಭಿಪ್ರಾಯಪಡುವುದೆತ್ತ? ಇತ್ತ ಫ್ರಾಂತಿಕ ಸರಕಾರಗಳು ಕೇವಲ ಹಿಂದುಗಳ ಮೇಲೆಯೆ ದಂಡನೆಯನ್ನು ಹೊರಿಸುವುದೆತ್ತ? ಈ ದಂಡದಿಂದ, ಕೇವಲ ಅನ್ಯಾಯವಲ್ಲದೆ ಹಿಂದುಸ್ತಾನದ ಬಹುಮತ ಜನಾಂಗದಲ್ಲಿ ಅಸಂತೋಷವೂ ಹುಟ್ಟುವುದು. ಅಲ್ಲದೆ ಈ ಬಗೆಯ ಸರಕಾರವ ಘೋರಣೆಯಿಂದ ಹಿಂದುಗಳಲ್ಲದ ಬೇರೆಯ ಜನರಿಗೆ ಒಂದು ರೀತಿಯಲ್ಲಿ ಪ್ರೋತ್ಸಾಹ ಕೊಟ್ಟಂತಾಗುವುದಿಲ್ಲವೆ? ಕ್ರಿಮಿನಲ್ ಮನೋವೃತ್ತಿಯ ಪುಂಡ ಜನರು ಹಿಂದುಗಳಲ್ಲದ ಬೇರೆ ಜನಾಂಗದಲ್ಲಿ ಇಲ್ಲವೆಂದಲ್ಲ. ಈಗವರು ಸ್ಥಿತಿಯಿಂದ ತಮ್ಮ ಕಾಯಕವನ್ನು ನಡೆಯಿಸಬಹುದು. ಯುದ್ಧ-ಬರಗಾಲಗಳ ಮೂಲಕ ಹೊಟ್ಟೆಗೆ ಸಿಕ್ಕುವುದು ಕಷ್ಟವಾಗಿದೆ. ಸರಕಾರವ ಈ ಘೋರಣೆ ಅವರಿಗೆ ಸಹಕಾರಿಯಾಗಿ ಇವರಿಂದ ಕಿಡಿಗೇಡಿತನ ಮಾಡಲು ಪಟ್ಟಿವರೆ, ಆ ತಪ್ಪಿಗೆ ಹಿಂದುಗಳು ಪ್ರಾಯಶ್ಚಿತ್ತ ಅನುಭವಿಸುವ ಸಂವರ್ಹ. ಇದೆಂತಹ ಬುದ್ಧಿವಂತ್ತೆ ಆಡಳಿತವ್ದು?

ಮುತ್ಸದ್ದಿತನ ಮರೆಯಾಯಿತೆ?

'ಹಿಂದುಸ್ತಾನದ ಇಂದಿನ ಸರಕಾರದ ನೀತಿಯಲ್ಲಿ ಮುತ್ಸದ್ದಿತನದ ಅಭಾವವಿದೆ' ಎಂದು ಸಪ್ರುಸಮಿತಿ ಹೇಳುವುದು ಸುಳ್ಳಲ್ಲ ಎನ್ನುವ ಪ್ರಸಂಗ ಬಂದಿದೆ. ಯುದ್ಧದಂತಹ ಗಂಡಾಂತರಕಾಲದಲ್ಲಿ ಜನತೆಯ ಅಸಂತೋಷವನ್ನು ಹೊರೆಕಿಸುವುದು ಮುತ್ಸದ್ದಿತನವಲ್ಲ; ಮುಂದಾಳುಗಳನ್ನು ಬಂಧನದಲ್ಲಿರಿಸಿ, ಅವರ ಮೇಲೆ ಸಂಬಂಧವಿಲ್ಲದ ಕೃತಿಗಳ ಹೊಣೆಯನ್ನು ಹೊರಿಸುವುದು ಜನತೆಯ ವಿಶ್ವಾಸಕ್ಕೆ ಕಾರಣವಾಗಿ ಮುತ್ಸದ್ದಿತನವೆನಿಸುವುದಿಲ್ಲ; ದೇಶವನ್ನು ಅನ್ಯರಿಂದ ಸಂರಕ್ಷಿಸುವುದಗತ್ಯವಾದಾಗ, ದೇಶದ ಜನತೆಯೊಡನೆಯೆ ತಂಟೆಯನ್ನು ಹೂಡುವುದು ಯಾವ ಸರಕಾರಕ್ಕೂ ಮುತ್ಸದ್ದಿತನವೆನಿಸದು; ಒಂದು ತತ್ತ್ವವನ್ನು ಸಾರಿ ಅದರ ಆಚರಣೆಯನ್ನು ತಪ್ಪಿಸಲು ಯತ್ನಿಸುವುದೂ ಮುತ್ಸದ್ದಿತನವಲ್ಲ; ಸತ್ಯಕ್ಕೆ ಕಣ್ಣುಮುಚ್ಚಿ, ಅಸತ್ಯದಿಂದ ಆತ್ಮತೃಪ್ತಿಯನ್ನು ಹೊಂದುವುದು ಮುತ್ಸದ್ದಿತನವಲ್ಲ; ಸಹಾಯಕ ರಾಷ್ಟ್ರಗಳಿಗೆ ಹಿಂದುಸ್ತಾನದ ಸಹಾಯ-ಸಹಕಾರಗಳ ಮಹತ್ತ್ವವಿದ್ದಾಗ, ಅವನ್ನು ಕಳೆದುಕೊಂಡು, ಕಳೆದುಕೊಂಡುದನ್ನು ನಿಭ್ಕಾರಣದಿಂದ ಬಚ್ಚಿಡಲು ಯತ್ನಿಸುವುದೂ ಮುತ್ಸದ್ದಿತನವಲ್ಲ. ಆಡಳಿತದಲ್ಲಿ ಜೋಗ್ಯತೆಯೂ ಇಲ್ಲವೆಂದು ಸಪ್ರು-ಸಮಿತಿಯು ಮಹತ್ತ್ವದ ಅಭಿಪ್ರಾಯವನ್ನು ಸಾರಿದೆ. ಅವನ್ನು ಸಾಧಿಸುವ ಅಗತ್ಯ ಕಾಣಿಲ್ಲ. ಇತ್ತೀಚೆಗಿನ ಒಂದು ದೃಷ್ಟಾಂತವನ್ನು ಕೊಡಬಹುದು. 'ಸಮುದ್ರ ಚಳವಳಿಯಿಂದ ರೈಲುಮಾರ್ಗಕ್ಕೆ ಹಾನಿಯಾಗಿದೆ' ಎಂದು ಸೈಸರಾಯರು ಕಲಕತ್ತೆಯಲ್ಲಿ ಹೇಳುವಾಗ 'ಚಳವಳಿಂದ ಯುದ್ಧಕಾರ್ಯದಲ್ಲಿ ಒಂದು ಕಟ್ಟಿಯು ವ್ಯತ್ಯಾನವಾಗಿಲ್ಲ' ಎಂದು ಕಾನಡಾದಲ್ಲಿ ಸರ್ ಮುಫರುಲ್ಲಾ ಖಾನರು ಹೇಳಿದ್ದಾರೆ! ಆರ್ಥಾತ್, 'ರೈಲುಮಾರ್ಗಕ್ಕೆ ಯುದ್ಧಕಾರ್ಯದಲ್ಲಿ ಕಟ್ಟಿಯಷ್ಟೂ ಮಹತ್ತ್ವವಿಲ್ಲ' ಎಂದು ಅಭಿಪ್ರಾಯವೊ? ಈ ಸಂಗತಿ ಅಸಹಕಾರಕ್ಕಿಂತ ಅಯೋಗ್ಯತೆಯು ದೃಷ್ಟಾಂತವೆಂದು ಹೇಳಬಹುದು.

ಸೈಸರಾಯರ ವಿಪರೀತವಾದ

ಹಿಂದುಸ್ತಾನದ ರಾಜಕೀಯ ತೊಡಕನ್ನು ಬಿಡಿಸುವ ಜನ್ಮೆ

ಅ. ಭಾ. ಹಿಂದುಮಹಾಸಭೆಯ ಸನ್ಮಾನ್ಯ ಅಧ್ಯಕ್ಷರಾದ

ಬ್ಯಾ. ಸಾವರಕರ ಇವರ

ಸ್ಫೂರ್ತಿದಾಯಕ ಚರಿತ್ರೆ

ಕರ್ನಾಟಕ ಕುಲಪುರೋಹಿತ ಆಲೂರ ವೆಂಕಟರಾಯರ ಉಜ್ವಲವಾದ ಮುನ್ನುಡಿಯೊಡನೆ

ಬೆಲೆ: ೨ ಆಣೆ ಮಾತ್ರ (ಅಂಚೆ ವೆಚ್ಚ ಅರ್ಧಾಣೆ)

ಕನ್ನಡದಲ್ಲಿಯ ಎಲ್ಲ ಅಧುನಿಕ ಪುಸ್ತಕಗಳು ಇಲ್ಲಿ ದೊರೆಯುತ್ತವೆ.

ರಾಜಹಂಸ ಕಾರ್ಯಾಲಯ, ಧಾರವಾಡ.

ಜಂ ವರ್ಷಗಳಿಂದ ಅನುಭವಪಟ್ಟ
ಕರ್ಕಿ ಮತ್ತು ಕಂಪನಿ
ಇವರ
ಜ್ವರದ ಗುಳಿಗೆ
ಬಾಟ್ಲಿಗೆ ೧ ರೂ.
ಎಲ್ಲ ಪ್ರಕಾರದ ಜ್ವರಗಳಮೇಲೆ ದಿವ್ಯ ಔಷಧ!
ವಿಳಾಸ:— ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ,
ಗಿರಗಾಂವ, ಮುಂಬಯಿ.

ವೈಸರಾಯರು ತಮ್ಮ ಕಲಕತ್ತೆಯ ಭಾಷಣದಲ್ಲಿ ಒಂದು ಪ್ರಯತ್ನವನ್ನಾಗಲಿ ಸೂಚನೆಯನ್ನಾಗಲಿ ಮಾಡಲಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಭಾರತದ ರಾಜಕೀಯ ಪಕ್ಷ-ಗಳಂತೆ ಸರಕಾರಕ್ಕಾದರೂ ತೊಡಕನ್ನು ಬಿಡಿಸುವ ಹೊಣೆ ಇದೆ. ಆ ಹೊಣೆಗಾರಿಕೆಯನ್ನು ಬದಿಗಿಟ್ಟು, ವೈಸರಾಯರು ಮತ್ತೆ ಕೀಸರಹುವಂತೆ ಹಳೆಯ ಪಾಡನ್ನೇ ಹಾಡಿದರು. 'ಫೆಸ್ಸ್‌ಯೋಜನೆ ಪ್ರಾಮಾಣಿಕ ಮತ್ತು ಮಹತ್ವವುಳ್ಳದು ಎಂದು ಇಡಿಯ ಜಗತ್ತಿನ ಅಭಿಪ್ರಾಯವಿದೆ' ಎಂದು ವೈಸರಾಯರು ಆ ಯೋಜನೆಗೆ ಶಿಫಾರಸಿನಪತ್ರವನ್ನು ಕೊಟ್ಟಿದ್ದಾರೆ. ಆದರೆ ಹಿಂದುಸ್ಥಾನದ ಎಲ್ಲ ಪಕ್ಷಗಳಿಗೂ ಮೇಣವಾದ ಯೋಜನೆಗೆ ಜಗತ್ತಿನ ಸರ್ಟಿಫಿಕೇಟು ಅಪ್ರಸ್ತುತ ಎಂಬುದು ಸರಕಾರಕ್ಕೆ ಹೊಳೆದಂತಿಲ್ಲ. ಇಂದು ಅಧಿಕಾರವನ್ನು ಬಿಟ್ಟುಕೊಟ್ಟರೆ ಯಾವ ಪಕ್ಷದವರು ಅದನ್ನು ಸ್ವೀಕರಿಸಬೇಕು ಎಂಬ ಬಗ್ಗೆ ಭಾರತೀಯರಲ್ಲಿ ಪರಸ್ಪರ ಒಪ್ಪಿಗೆ ಇಲ್ಲದ್ದಕ್ಕಾಗಿ ಲಾರ್ಡ್‌ಲಿನ್‌ಲಿಥ್‌ಗೋ ಸಾಹೇಬರು ವಿಷಾದ ವನ್ನು ವ್ಯಕ್ತಮಾಡಿದ್ದಾರೆ! ಆದರೆ 'ಆ ಪ್ರಶ್ನೆ ಬಿಡಿಸುವುದು ಹಿಂದೀಯರ ಹಕ್ಕು, ಅಲ್ಲಿಯವರೆಗೆ ಬ್ರಿಟಿಶರು ತಡೆಯ ಬೇಕಾಗಿಲ್ಲ' ಎಂದು ಉತ್ತರಕೊಟ್ಟರೆ 'ನಾವು ಅಲ್ಪಸಂಖ್ಯಾಕರ ಸಂರಕ್ಷಣೆಗಾಗಿ ಪಣತಬದ್ಧರಾಗಿದ್ದೇವೆ, ಅದಕಾಗಿ ತಡೆಯುವೆವು' ಎಂದು ವಾದಿಸುತ್ತಾರೆ. ಅಲ್ಪಸಂಖ್ಯಾಕರಿಗೆ ದೇಶದ ಸಂರಕ್ಷಣೆಯ ಮಹತ್ವವಿಲ್ಲವೆ? ತಮ್ಮ ಬಾಂಧವರಿಗಿಂತ ಬ್ರಿಟಿಶರಂತಹ ಪರಕೀಯರನ್ನು ನಂಬುವ ಅಲ್ಪಸಂಖ್ಯಾಕರಿಗೆ ಭಾರತದ ಸಾರ್ವ-ಜನಿಕ ಜೀವನದಲ್ಲಿ ಯಾವ ಸ್ಥಾನವಿದೆ? ಈ ಅಲ್ಪಸಂಖ್ಯಾಕ ರೆಂದರೆ ಅನುಯಾಯಿಗಳಿಲ್ಲದ ಮುಂದಾಳುಗಳು! ಇಂತಹ ಪರಿಸ್ಥಿತಿಯನ್ನು ನೋಡಿದಂತೆ ನಿರಾಶೆಯೂ ಅಸಹನೆಯೂ (frustration and resentment) ಹೆಚ್ಚುವುವು ಎಂದು ಹೇಳುವಲ್ಲಿ ಸಪ್ರು ಸ್ಥಾಯಿಸಮಿತಿಯು ಪ್ರತಿಯೊಬ್ಬ ಭಾರತಾಭಿ-ಮಾನಿಯ ಅಭಿಪ್ರಾಯವನ್ನೆ ವ್ಯಕ್ತಮಾಡಿದೆ. ಆದರೆ ಹೆಚ್ಚು ವಿಚಾರ ಮಾಡಿದಲ್ಲಿ ರಾಜಾಜಿಯವರು ಹೇಳುವಂತೆ, ಭಾರತದ ಪ್ರಶ್ನೆ ಬಿಡಿಸಲು ಭಾರತೀಯರ ಅನೈಕ್ಯವಲ್ಲ, ಬ್ರಿಟಿಶರ ಅಜ್ಞಾನಾತ್ಮಕ ಛಲವಾದವೆ ಕಾರಣವೆಂಬುದೆ ಸ್ಪಷ್ಟವಾಗುವುದು.

ಆಶ್ಚರ್ಯವಲ್ಲ, ಅನಿವಾರ್ಯ

ಸದ್ಯದ ಜಳವಳದಲ್ಲಿ ಕಾಂಗ್ರೆಸು ವಿರೋಧಿಸುತ್ತಲಿದ್ದ ಹಿಂಸೆಯೆ ಪ್ರಮುಖವಾಗಿದೆ ಎಂದು ಅನೇಕರಂತೆ ವೈಸರಾಯರೂ ಆಶ್ಚರ್ಯದ ಉದ್ಗಾರವನ್ನು ತೆಗೆದಿದ್ದಾರೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬಹುದು. ಉದಾತ್ತವಾದ ಅಹಿಂಸಾ ಮಾರ್ಗವನ್ನು ಕಾಂಗ್ರೆಸಿಗೂ ಭಾರತೀಯರಿಗೂ ಮಹಾತ್ಮರು ಕಲಿಸಿಕೊಟ್ಟವರು. ಆದರೆ ಇಂದು ಅವರೂ ಅವರ ಅನುಯಾಯಿ-ಗಳೂ ಕಾರಾಗೃಹದಲ್ಲಿದ್ದಾರೆ. ಸಭೆ, ಭಾಷಣ, ಮೆರವಣಿಗೆ, ಪ್ರಾಮಾಣಿಕವಾದ ಜರ್ಜ-ಇಂತಹ ಎಲ್ಲವೂ ಕಾಯಿದೆಗೆ ವಿರುದ್ಧ ಎನಿಸಿವೆ. ಮುಂದಾಳುಗಳಿಲ್ಲದ್ದಕ್ಕೆ ಧೈರ್ಯಗೆಟ್ಟು, ಮುಕ್ತ ಮಾರ್ಗಗಳಿಲ್ಲದ್ದಕ್ಕೆ ಹತಾಶರಾಗಿ ಜನರು ಹಿಂಸಾಮಾರ್ಗಕ್ಕೆ ಎಡವಿರಬಹುದಾಗಿದೆ. ಈ ದೃಷ್ಟಿಯಿಂದ ಇದು ಆಶ್ಚರ್ಯವಲ್ಲ, ಅನಿವಾರ್ಯ. 'ಹಿಂಸೆ ಹೇಡಿಗಳ ಶಸ್ತ್ರ' ಎಂದು ಮಹಾತ್ಮರು ಅಭಿಪ್ರಾಯ ಪಟ್ಟು ನಮಗೆ ಧೈರ್ಯವನ್ನೇ ಕಲಿಸುತ್ತಿದ್ದರು. ಆದರೆ 'ಹಿಂಸೆ ಹತಾಶರ ಶಸ್ತ್ರ' ಎಂಬುದು ಸರಕಾರದ ಸದ್ಯದ ಧೋರಣದ ಫಲವಾಗಿದೆ ಎಂದು ನಮಗಂತೂ ಶಂಕೆ.

ಮುಂಬಯಿಯಲ್ಲಿ 'ಜಯಂತಿ' ಶಾಖಾಕಚೇರಿ

ಮುಂಬಯಿಯು ದೊಡ್ಡ ಪಟ್ಟಣ. ಅದರಲ್ಲಿಯೂ ಅಲ್ಲಿರುವ ಕನ್ನಡಿಗರು ಇಡಿಯ ಪಟ್ಟಣದಲ್ಲೆಲ್ಲ ಹೆದರಿಹೋಗಿದ್ದಾರೆ. ಹೀಗಾಗಿ ಎಲ್ಲರ ಕಣ್ಣಿಗೆಬೀಳುವಂತೆ 'ಜಯಂತಿ'ಯನ್ನು ಮುಂಬೈಯಲ್ಲಿ ಇರಿಸುವುದು ಕಷ್ಟಸಾಧ್ಯ. ಆದುದರಿಂದಲೆ ಇದು-ವರೆಗೆ ಅಲ್ಲಿ ಒಂದೆಡೆ ಸಿಕ್ಕುತ್ತಿದ್ದರೆ, ಹಲವಡೆ ಸಿಕ್ಕುತ್ತಿರಲಿಲ್ಲ. ಈಗ ಜಯಂತಿಯ ಹಿತಚಿಂತಕರೂ ತರುಣರೂ ಸನ್ಮಿತ್ರರೂ ಆದ ಮುಂಬಯಿಯ ನಿವಾಸಿಗಳ ಸಹೃದಯ ಸಹಾಯ-ಸಹಾನು-ಭೂತಿಗಳ ಮೂಲಕ, ಜಯಂತಿಯ ಮಾರಾಟದ ಸಮಸ್ಯೆ ಬಗೆ-ಹರೆದೀತೆಂದು ಭಾವಿಸಿದ್ದೇವೆ. ಈಗ ಅಲ್ಲಿ ನಮ್ಮ ಶಾಖಾಕಚೇ-ರಿಯ ಏರ್ಪಾಡನ್ನು ಮಾಡಿದ ಶ್ರೀಮಾನ್ 'ಸೀತಾತನಯ'ರಿಗೆ ಜಯಂತಿಯು ಚಿರಋಣಿಯಾಗಿದೆ. ಮುಂಬಯಿಯ ಕನ್ನಡಿಗರು ತಮಗೆ 'ಜಯಂತಿ'ಯ ವಿಷಯ ಏನೂ ಬೇಕಾಗಿದ್ದರೂ ನಮ್ಮ ಶಾಖಾಕಚೇರಿಯಲ್ಲಿ ವಿಚಾರಿಸಬೇಕು. ಸದ್ಯ ಈ ಶಾಖಾ-ಕಚೇರಿಯ ವಿಳಾಸ, **ಜಯಂತಿಯ ಮುಂಬೈ ಶಾಖೆ, ೫೯ ಗೋಗಾರಸ್ತೆ, ಮೂರನೆಯ ಮಾಳಿಗೆ, ಕೋಟೆ ಮುಂಬೈ** ಎಂದಿದೆ. ಮುಂಬಯಿಯಲ್ಲಿರುವ ಜಯಂತಿಯ ಅಭಿಮಾನಿಗಳು ಇದರ ಪ್ರಯೋಜನ ಪಡೆದುಕೊಳ್ಳಬೇಕಾಗಿ ವಿನ್ನಹ.

—ವ್ಯವಸ್ಥಾಪಕ

'ನಾನು ಈ ಮಧು ತೆಗೆದುಕೊಳ್ಳುವಾಗ ಚಿಕ್ಕವರಲ್ಲಿ ಚಿಕ್ಕವಳಾಗುತ್ತೇನೆ'



★ "ಈ ಮಧು ಹೆಸರಿನಂತೆ ರುಚಿಯಾಗಿದೆ. ಇದನ್ನು ತೆಗೆದುಕೊಳ್ಳುವಾಗ ನಾನು ಚಿಕ್ಕವರಲ್ಲಿ ಚಿಕ್ಕವಳಾಗುತ್ತೇನೆ.

★ ಆದರಿಂದ ಪ್ರಸೂತಿನಂತರದ ನನ್ನ ಅಶಕ್ತತೆ ಪೂರ್ಣವಾಗಿ ಇಲ್ಲದಂತಾಗಿ, ರಕ್ತಕ್ಷಯ ತುಂಬಿಬಂದಿತು. ಮತ್ತು ನಿರೋಗಿತನದ ಉತ್ಸಾಹವು ನನ್ನ ಮೈಯಲ್ಲಿ ಉಕ್ಕ ತೊಡಗಿತು.

★ ಡಾಕ್ಟರ್ ಜನರು ಇದನ್ನು ಉಪಯೋಗಿಸಿದರೆ ಒಳ್ಳೇಯದು!"

ಎಲ್ಲೆಲ್ಲೂ ದೊರೆಯುತ್ತೆ!

ವಿಷ್ಣುತೈಲಮಧು

MANE

ರಿಜಿಸ್ಟರ್ಡ್

ಮ್ಯಾನೇಜರ್ ★ ದ್ರಾಕ್ಷಾರ್ಕಮಧು ಆಫೀಸ ☆ ನಿಪ್ಪಾಣಿ.

ನಮ್ಮ ಏಜಂಟರಿಗೆ ಸೂಚನೆಗಳು

೧. ಕಾಗದವ ಬೆಲೆಯು ನಿತಿಮಿತಾರಿ ಹೆಚ್ಚಿದೆಯಾದುದರಿಂದ 'ಜಯಂತಿ' ಸಂಚಿಕೆಗಳನ್ನು ಎಷ್ಟು ಬೇಕೋ ಅಷ್ಟೇ ಪ್ರಕಟಿಸಲಾಗುವುದು. ಆದುದರಿಂದ ಸಂಚಿಕೆಗಳು ಹೆಚ್ಚಿಗೆ ಬೇಕಾದರೆ— ಅದರಂತೆಯೆ ಕಡಿಮೆ ಬೇಕಾದರೆ, ಪ್ರತಿ ತಿಂಗಳ ಮೊದಲನೆಯ ವಾರದಲ್ಲಿಯೆ ಕಾರ್ಯಾಲಯಕ್ಕೆ ಬರೆದು ತಿಳಿಸಬೇಕು. ಇಲ್ಲವಾದಲ್ಲಿ ಹೆಚ್ಚಿಗೆ ಬೇಕಾದವರು ನಿರಾಶರಾಗಬೇಕಾಗುವುದು; ಕಡಿಮೆ ಬೇಕಾದವರು ಸಂಚಿಕೆಗಳನ್ನು ಳಿಸಿಕೊಂಡು ನಷ್ಟಕ್ಕೆ ಗುರಿಯಾಗಬೇಕಾಗುವುದು.

೨. ಸರಿಯಾದ ಕಾರಣಗಳಿಲ್ಲದೆ,—ಕೇವಲ ಮಾರಲೆ ಉಳಿದಿವೆಯೆಂಬ ಕಾರಣದಿಂದ—ಯಾರ ಕಡೆಯಿಂದಲೂ ಸಂಚಿಕೆಗಳನ್ನು ಮರಳಿ ತೆಗೆದುಕೊಳ್ಳುವುದಿಲ್ಲ.

೩. ಪ್ರತಿಯೊಬ್ಬ ಏಜಂಟನೂ ಆ ಆ ತಿಂಗಳ ಹಣವನ್ನು, ಅಂಚೆಯ ತಾರೀಖಿನೊಳಗಾಗಿಯೆ ಕಳುಹುವಂತೆ ಕಾರ್ಯಾಲಯಕ್ಕೆ ತಪ್ಪದೆ ಕಳುಹಬೇಕು. ಹಣ ಕಳುಹದಿರುವ ಏಜಂಟರಿಗೆ ಮುಂದಿನ ತಿಂಗಳ ಸಂಚಿಕೆಗಳನ್ನು ಮುಂದಿನ ಕಳುಹಬಾರದೆಂಬ ನಿರ್ಬಂಧವನ್ನು ಇರಿಸಿಕೊಳ್ಳಲಾಗಿದೆ.

೪. ಹದಿನಾರು ಸಂಚಿಕೆಗಳಿಗಿಂತ ಕಡಿಮೆ ತರಿಸಿಕೊಳ್ಳುವವರಿಗೆ ಸಂಚಿಕೆಗಳನ್ನು ಅಂಚೆಯ ಮೂಲಕ ಕಳುಹಲಾಗುತ್ತದೆ. ಅದಕ್ಕೆ ಮಿಾರಿದ ಸಂಖ್ಯೆಯ ಸಂಚಿಕೆಗಳನ್ನು— ಅನುಕೂಲತೆಯಿದ್ದರೆ— ರೈಲ್ವೇ ಪಾರ್ಸಲಿನಿಂದ ಕಳುಹಲಾಗುತ್ತದೆ.

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾರವಾಡ.

★ ನಿಮ್ಮ ಮೂಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ವರ್ಷದ ವ್ಯಾಲ್ಯುವೇಷನ್‌ನಲ್ಲಿ (Valuation) ಲಾಭವನ್ನು ಪಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ಒಕ್ಕಂಡೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಳಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕಕ್ಕ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ವಾಲುಗಳನ್ನೂ ಕೊಂಡುಕೊಳ್ಳಲೇ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು:— ಎಮ್. ಗೋವರ್ಧನರಾವ್, ಮ್ಯಾನೇಜರ್

The United Karnatak Insurance Co. Ltd., DHARWAR.



"ಕಾಸ್ಕೋ" ಪಲವು ತರದ ಆತ್ಯುತ್ತಮ ಔಷಧಿಗಳಿಂದ ಕೂಡಿದ್ದು, ಪಾಸಕದಂತಿರುವ ಈ ಮದ್ದು ಕೆಮ್ಮಿನ ಮೂಲವನ್ನು ಕಿತ್ತೊಗೆದು, ತಳವನ್ನು ಕಡಿದು ಮಾಡಿ, ಶೀತರೋಗಕ್ಕೆ ಸಂಬಂಧಿಸಿದ ಎಲ್ಲಾ ಕಶ್ಮಲವನ್ನು ತೆಗೆದು, ಮುಂದಕ್ಕೆ ಅಂತಹ ರೋಗಗಳು ಬಾರದಂತೆ ಹೃದಯ ಮತ್ತು ಶ್ವಾಸಕೋಶಗಳನ್ನು ಕ್ರಮವಾಗಿ ಇಡುವುದು. ಅದು ಅತಿ ಶಕ್ತಿಯುಳ್ಳದ್ದಾಗಿ, ಬಿಳಿಯ ಪೂಡರಿನಲ್ಲಿ ರುಚಿಕರವಾಗಿ ಹೊರಹೊಮ್ಮುತ್ತದೆ. ಇಂದೇ ಒಂದು ಬಾಟ್ಲಿಯನ್ನು ಕೊಂಡುಕೊಳ್ಳಿರಿ.

ಗುಣವಾಗುವತನಕ ಒಂದೆರಡು ಗಂಟೆಗಳ ಅಂತರದಲ್ಲಿ ಒಂದೊಂದು ಬಿಲ್ಲೆಯನ್ನು ಸೇವಿಸಬೇಕು.

ಎಲ್ಲಾ ಔಷಧಾಲಯಗಳಲ್ಲಿ ದೊರಕುವುದು.

Kasko

ಆಶ್ಚರ್ಯಕರವಾದ ಕೆಮ್ಮು-ನಾಶಕರ ಬಿಲ್ಲೆಗಳು

ಆಯುರ್ವೇದಾಶ್ರಮ ಫಾರ್ಮಸಿ ಲಿಮಿಟೆಡ್, ಅಹಮ್ಮದ್‌ನಗರ

ಕರ್ನಾಟಕ ತಾಯಿ:— ಸ್ಟೇಶನ್‌ರೋಡ, ಹುಬ್ಬಳ್ಳಿ.

Printed by Mr. V. Y. Jathar at the Karnatak Printing Works, Dharwar, and Published for the Proprietors Jayanti Publications by N. V. Mallegatti at the Jayanti Office, Dh

ಜೀವಜಲ



ಕರ್ನಾಟಕದ
ಸರ್ವಾಣಕ್ಕಾಗಿ
ಹೊರಾಡುವ
ಏಸಪತ್ರಿಕೆಯು

ಫೆಬ್ರುವರಿ
೧೯೪೪

ಪ್ರೊ. ಜಾಗಿರದಾರ
ಎಲ್. ಜಿ. ಬೇಂದ್ರೆ
ವೀರಭದ್ರ ಶರ್ಮ
ದೇವಾಂಗನಾ ಶಾಸ್ತ್ರಿ

CONTD IN
NEXT ROLL

CONTD IN
NEXT ROLL

END

END

END

END